# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮಾರ್ಚ್ 09, 2021

ಸಂಪುಟ : 47 ಸಂಚಿಕೆ : 309 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಎಪಿಎಂಸಿ ವರ್ತಕರಾದ ಎಲೆಬೇತೂರು ಮಾಳಿಗೇರ ಎಂ. ನಾಗಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ದಿ|| ಮಾಳಿಗೇರ ಚನ್ನಪ್ಪನವರ ಮಗನಾದ, ದಾವಣಗೆರೆ ಎಪಿಎಂಸಿ ವರ್ತಕರೂ, ಜಮೀನ್ದಾರರೂ ಆದ

**ಶ್ರೀ ಎಂ. ನಾಗಬಸಪ್ಪ** ಅವರು

ದಿನಾಂಕ 08.03.2021ರ ಸೋಮವಾರ ರಾತ್ರಿ 8 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿಯರು, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09.03.2021ರ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಎಲೆಬೇತೂರು ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮಾಳಿಗೇರ ವಂಶಸ್ಥರು, ಎಲೆಬೇತೂರು.

**ಎಂ. ನಾಗಬಸಪ್ಪ**
**ಮರ್ಚೆಂಟ್ ಅಂಡ್ ಕಮೀಷನ್ ಏಜೆಂಟ್**
ಎ.ಪಿ.ಎಂ.ಸಿ. ಯಾರ್ಡ್ 'ಬಿ' ಬ್ಲಾಕ್, ದಾವಣಗೆರೆ.

ಮೊಬೈಲ್ : 8123297117, 9916581999, 9480176598


**36ನೇ ವರ್ಷದಲ್ಲಿ ಹೋಟೆಲ್ ಅಪೂರ್ವ**
ಸರ್ಕಾರಿ ಬಾಲಕರ ಪ್ರೌಢಶಾಲಾ ಮೈದಾನದ ಎದುರು,
ಪಿ.ಬಿ. ರಸ್ತೆ, ದಾವಣಗೆರೆ.
ಮೊಬೈಲ್ : 94481 14684

**8ನೇ ವರ್ಷದಲ್ಲಿ ಅಪೂರ್ವ ರೆಸಾರ್ಟ್ಸ್**
ಎನ್.ಹೆಚ್.-4, ಬೈಪಾಸ್, ಬಾಡಾ ಕ್ರಾಸ್ ಹತ್ತಿರ, ದಾವಣಗೆರೆ,
81056 88333, 70229 01333, 70229 17333, 72591 86333
Email : apoorvagroup2@gmail.com,
Website : www.apoorvaresortsdavangere.in

**ಯಶಸ್ವಿ 13ನೇ ವರ್ಷದಲ್ಲಿ ಅಪೂರ್ವ ರೆಸ್ಟೋರೆಂಟ್**
ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಹತ್ತಿರ,
ಪಿ.ಬಿ. ರಸ್ತೆ, ದಾವಣಗೆರೆ.
ಮೊಬೈಲ್ : 94481 14684

**ಹೋಟೆಲ್ ವೈಶಿಷ್ಟ್ಯತೆಗಳು :**

◆ ಕಾನ್ಫರೆನ್ಸ್ ಹಾಲ್ ◆ ಊಟದ ಹಾಲ್ ◆ ಉಪಹಾರ ಗೃಹಗಳು ◆ ಸಿಹಿ ತಿಂಡಿ ◆ ಐಸ್‌ಕ್ರೀಂ ◆ ಮತ್ತಿತರೆ ಅತ್ಯಾಧುನಿಕ ವ್ಯವಸ್ಥೆ ◆ ಮಕ್ಕಳ ಜನ್ಮದಿನೋತ್ಸವ ◆ ವಿವಾಹ ವಾರ್ಷಿಕೋತ್ಸವ ಎಂಗೇಜ್‌ಮೆಂಟ್ ಇತ್ಯಾದಿ ಶುಭ ಸಮಾರಂಭಗಳಿಗೆ ಸಭಾಂಗಣ ವ್ಯವಸ್ಥೆ ◆ ಸಮಾರಂಭಗಳಿಗೆ ಹೊರಗಡೆ ಕ್ಯಾಟರಿಂಗ್ ವ್ಯವಸ್ಥೆಯೂ ಇದೆ.

**ಅಪೂರ್ವ ರೆಸಾರ್ಟ್ಸ್‌ನ ಸೌಲಭ್ಯಗಳು :**

◆ 28 ಎಕ್ಸಿಕ್ಯೂಟಿವ್ಸ್ ಎ.ಸಿ. ರೂಂಗಳು ◆ 11 ಸ್ಟುಡಿಯೋ ಎ.ಸಿ. ರೂಂಗಳು ◆ ಬಹು ತಿನಿಸು ರೆಸ್ಟೋರೆಂಟ್ ◆ ಗಾರ್ಡನ್ ಬಾರ್ ಅಂಡ್ ರೆಸ್ಟೋರೆಂಟ್ ◆ ಹೆಲ್ತ್ ಕ್ಲಬ್ ◆ ಈಜುಕೊಳ ◆ ಸಭಾಂಗಣ ◆ ಟ್ರಾವೆಲ್ ಡೆಸ್ಕ್ ◆ ಚಿಲ್ಡ್ರನ್ಸ್ ಗಾರ್ಡನ್ ◆ ವೈ-ಫೈ ಸೌಲಭ್ಯ ◆ ಸ್ಪಾ ಮತ್ತು ಜಿಮ್ ◆ ಹುಲ್ಲು ಹಾಸಿದ Open Air ರೆಸ್ಟೋರೆಂಟ್

**'ಎ.ಸಿ. ಕನ್ವೆನ್ಷನ್ ಹಾಲ್'**

ಮದುವೆ ಹಾಗೂ ಶುಭ ಸಮಾರಂಭಗಳಿಗೆ ಹಸಿರು ಪ್ರಕೃತಿಯ ಸುಂದರ ವಾತಾವರಣದಲ್ಲಿ ಸುಸಜ್ಜಿತ ಎ.ಸಿ. ಕನ್ವೆನ್ಷನ್ ಹಾಲ್ ಲಭ್ಯವಿದೆ. ಒಂದು ಸಾವಿರ ಜನ ಕುಳಿತುಕೊಳ್ಳಲು ಅವಕಾಶವಿರುವ ಲಾನ್ ಸಮಾರಂಭಗಳಿಗೆ ಸಿದ್ಧವಿದೆ.

ಬುಕ್ಕಿಂಗ್‌ಗೆ ಸಂಪರ್ಕಿಸಿ :
81056 88333
70229 01333
70229 17333
72591 86333






ದಾವಣಗೆರೆ ಮಹಾನಗರದಲ್ಲಿ 35 ವರ್ಷಗಳಿಂದ ಗ್ರಾಹಕರ ಅಪಾರ ಮೆಚ್ಚುಗೆಗೆ ಪಾತ್ರವಾಗಿ, ಅಮೋಘ ಸೇವೆಯಿಂದ ಮುನ್ನಡೆಯುತ್ತಿರುವ

**ದಕ್ಷಿಣ ಹಾಗೂ ಉತ್ತರ ಭಾರತದ ವಿಶೇಷ ಸಸ್ಯಹಾರಿ ಉಪಹಾರ, ಊಟಕ್ಕೆ ಹೆಸರುವಾಸಿಯಾಗಿರುವ ಹೋಟೆಲ್**

ಇವರು ದಾವಣಗೆರೆ ನಗರದ ಜನತೆಯಲ್ಲಿ ಹೋಟೆಲ್ ಅಪೂರ್ವ ಮತ್ತು ಅಪೂರ್ವ ರೆಸ್ಟೋರೆಂಟ್ ಮೂಲಕ ಮನೆ ಮಾತಾಗಿದ್ದಾರೆ. ಇವರ ಹೋಟೆಲ್‌ಗಳು ಶುಚಿ–ರುಚಿಗೆ ಮತ್ತೊಂದು ಹೆಸರಾಗಿವೆ. ಹೋಟೆಲ್ ಉದ್ಯಮದಲ್ಲಿ ಇವರು ನೂತನವಾಗಿ ಇಟ್ಟಿರುವ ದಿಟ್ಟ ಹೆಜ್ಜೆಯ ಫಲವಾಗಿ 'ಅಪೂರ್ವ ರೆಸಾರ್ಟ್ಸ್' ಸುಸಜ್ಜಿತಗೊಂಡು 8ನೇ ವರ್ಷದಲ್ಲಿ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಾ ಬಂದಿದೆ. ಗ್ರಾಹಕರಿಗೆ ಶುಚಿ–ರುಚಿಯೊಂದಿಗೆ ವಿನೂತನ ಖಾದ್ಯಗಳನ್ನು ಪರಿಚಯಿಸುವ ಯೋಜನೆಯನ್ನೂ ಹೊಂದಿದ್ದಾರೆ. ಅಪೂರ್ವ ಹೋಟೆಲ್, ಅಪೂರ್ವ ರೆಸ್ಟೋರೆಂಟ್, ಅಪೂರ್ವ ರೆಸಾರ್ಟ್ಸ್‌ಗಳಲ್ಲಿ ಪರಿಪೂರ್ಣ ಕೌಟುಂಬಿಕ ವಾತಾವರಣವನ್ನು ಕಲ್ಪಿಸಿದ್ದಾರೆ.

ನುರಿತ ಬಾಣಸಿಗರಿಂದ ವಿಶಿಷ್ಟ ಹಾಗೂ ವಿಭಿನ್ನ ರೀತಿಯ ರುಚಿಯೊಂದಿಗೆ ಅಪೂರ್ವ ಗ್ರೂಪ್ ಆಫ್ ಹೋಟೆಲ್ಸ್

**ಅಣಬೇರು ರಾಜಣ್ಣ,** ಮ್ಯಾನೇಜಿಂಗ್ ಡೈರೆಕ್ಟರ್,
**ನಂದಕುಮಾರ್, ಡಾ|| ಪ್ರಸನ್ನ ಅಣಬೇರು**
**ಮತ್ತು ಕುಟುಂಬ ವರ್ಗದವರು ಹಾಗೂ ಸಿಬ್ಬಂದಿ ವರ್ಗದವರು**
**ಅಪೂರ್ವ ಗ್ರೂಪ್ ಆಫ್ ಹೋಟೆಲ್ಸ್, ದಾವಣಗೆರೆ.**

## ಎಸ್ಟಿ ಮೀಸಲಾತಿ ಹೆಚ್ಚಳ : ಇಂದು ಬೆಂಗಳೂರಿನಲ್ಲಿ ಸಭೆ



ಎಸ್ಟಿ ಮೀಸಲಾತಿ ಪ್ರಮಾಣವನ್ನು ಶೇ. 7.5 ಕ್ಕೆ ಹೆಚ್ಚಳ ಮಾಡುವ ವಿಚಾರ ಕುರಿತು ಚರ್ಚಿಸಲು ಇಂದು ಸಂಜೆ 5.30 ಕ್ಕೆ ಬೆಂಗಳೂರಿನ ಕುಮಾರ ಕೃಪ ಅತಿಥಿ ಗೃಹದಲ್ಲಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಸಚಿವರು, ಸಂಸದರು, ಶಾಸಕರು ಹಾಗೂ ಸಮಾಜದ ಮುಖಂಡರು, ಹೋರಾಟಗಾರರ ಸಭೆಯನ್ನು ಕರೆಯಲಾಗಿದೆ. ಕಳೆದ ತಿಂಗಳು ಫೆ. 9 ರಂದು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಜರುಗಿದ 3ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಜಾತ್ರಾ ಸಮಾವೇಶದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಮಾ.9 ರ ಒಳಗಾಗಿ ಎಸ್ಟಿ ಮೀಸಲಾತಿ ಹೆಚ್ಚಿಸುವುದಾಗಿ ಭರವಸೆ ನೀಡಿದ್ದರು.

ಆದರೆ, ಇದುವರೆಗೂ ಮೀಸಲಾತಿ ಹೆಚ್ಚಳ ಕುರಿತು ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವ ಕಾರಣ ಬೆಂಗಳೂರಿನಲ್ಲಿ ಇಂದು ತುರ್ತು ಸಭೆ ಕರೆಯಲಾಗಿದೆ ಎಂದು ಮಠದ ಆಡಳಿತಾಧಿಕಾರಿ ಡಿ. ಓಬಳಪ್ಪ ತಿಳಿಸಿದ್ದಾರೆ.

## 'ಅಂತರಂಗದ ಧ್ವನಿ' ಕೃತಿ ಲೋಕಾರ್ಪಣೆ

ಆಶಾ ಕಲ್ಲನಗೌಡರ್ ರಚಿತ 'ಅಂತರಂಗದ ಧ್ವನಿ' ಕೃತಿ ಲೋಕಾರ್ಪಣೆ ಕಾರ್ಯಕ್ರಮವು ಇಂದು ಬೆಳಿಗ್ಗೆ 10 ಗಂಟೆಗೆ ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಜಾಗೃತ ಮಹಿಳಾ ಸಂಘದಲ್ಲಿ ನಡೆಯಲಿದೆ.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಪುಸ್ತಕ ಬಿಡುಗಡೆ ಮಾಡಲಿದ್ದು, ಸಂಘದ ಅಧ್ಯಕ್ಷರಾದ ಪ್ರೊ. ಬಿ. ವಿಮಲಾ ದಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಿಕ್ಷಕರು, ಸಾಹಿತಿಗಳಾದ ನಾಗರಾಜ್ ಸಿರಿಗೆರೆ ಮತ್ತು ಆರೋಗ್ಯ ಇಲಾಖೆಯ ಸಹಾಯಕ ಆಡಳಿತ ಅಧಿಕಾರಿ, ಸಾಹಿತಿ, ಡಾ॥ ಆನಂದ್ ಋಗ್ವೇದಿ ಪುಸ್ತಕ ಕುರಿತು ಮಾತನಾಡುವರು. ಕಸಾಪ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಬಿಐಇಟಿ ಕಾಲೇಜು ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ್, 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ವಿಜಯಕುಮಾರ್, ಸಂಘದ ಕಾರ್ಯದರ್ಶಿ ಉಮಾ ವೀರಭದ್ರಪ್ಪ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## ಚಿತ್ರದುರ್ಗದಲ್ಲಿ ಇಂದು 'ಸಿರಿ ಕನ್ನಡ ಪದಬಂಧ' ಕೃತಿ ಲೋಕಾರ್ಪಣೆ

ದಾವಣಗೆರೆಯ ಗ್ರಂಥಸರಸ್ವತಿ ಪ್ರತಿಭಾರಂಗವು ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ವಿಶ್ರಾಂತ ದ್ವಿತೀಯ ದರ್ಜೆ ಸಹಾಯಕ ನಾಗರಾಜು ಗೊಡಬನಾಳು ಅವರು ರಚಿಸಿರುವ 'ಸಿರಿ ಕನ್ನಡ ಪದಬಂಧ' ಕೃತಿ ಇಂದು ಕೋಟೆನಾಡು ಚಿತ್ರದುರ್ಗದಲ್ಲಿ ಲೋಕಾರ್ಪಣೆಗೊಳಿಸಲಿದೆ.

ಚಿತ್ರದುರ್ಗದ ರೋಟರಿ ಬಾಲಭವನದಲ್ಲಿ ಶ್ರೀ ಡಾ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಲಿದ್ದಾರೆ. ಎಸ್ಸೆಸ್ಸೆಲ್ಸಿ ಕನ್ನಡ ಪಾಠ-ಪದ್ಯಗಳ ಆಧರಿಸಿ ರಚಿಸಿರುವ ಈ ಪದಬಂಧ ಕೃತಿಯನ್ನು ದಾವಣಗೆರೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಅಭಿವೃದ್ಧಿ) ಹೆಚ್.ಕೆ. ಲಿಂಗರಾಜು ಅವರು ಈ ಪುಸ್ತಕವನ್ನು ಬಿಡುಗಡೆ ಮಾಡಲಿದ್ದಾರೆ.

ಪಠ್ಯಪೂರಕ ಜ್ಞಾನ ನೀಡುವ ಪುಸ್ತಕದ ಪರಿಚಯವನ್ನು ಸಾಹಿತಿ ಡಾ.ಲೋಕೇಶ್ ಅಗಸನಕಟ್ಟೆ ಅವರು ನೆರವೇರಿಸಲಿದ್ದಾರೆ.

ಚಿತ್ರದುರ್ಗ ರೋಟರಿ ಕ್ಲಬ್ ಅಧ್ಯಕ್ಷ ಆರ್. ನಾಗೇಂದ್ರ ಬಾಬು ಅಧ್ಯಕ್ಷತೆಯಲ್ಲಿ ಪ್ರಕಾಶಕರಾದ ಆರ್. ಶಿವಕುಮಾರಸ್ವಾಮಿ ಕುರ್ಕಿ ಅವರು ಆಶಯ ನುಡಿಗಳನ್ನಾಡಲಿದ್ದಾರೆ.

ಮುಖ್ಯ ಅತಿಥಿಯಾಗಿ ವೈ. ಚಂದ್ರಶೇಖರಯ್ಯ ಹಾಗೂ ವಿಶೇಷ ಆಹ್ವಾನಿತರಾಗಿ ಬೆಂಗಳೂರು ವಿಮಾನ ನಿಲ್ದಾಣ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹನುಮಲಿ ಷಣ್ಮುಖಪ್ಪ ಅವರು ಆಗಮಿಸಲಿದ್ದಾರೆ.

## ಹೊಳೆಸಿರಿಗೆರೆಯಲ್ಲಿ ಮಹಿಳಾ ದಿನಾಚರಣೆ



ಮಲೇಬೆನ್ನೂರು, ಮಾ.8- ಹೊಳೆಸಿರಿಗೆರೆ ಗ್ರಾ.ಪಂ. ಕಚೇರಿಯಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಗ್ರಾ.ಪಂ. ಅಧ್ಯಕ್ಷೆ ಕಾವ್ಯ ಮಂಜುನಾಥ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಸಮಾಜದಲ್ಲಿ ಮಹಿಳೆಯರಿಗೆ ಗೌರವ ಸ್ಥಾನವಿದ್ದು, ಆ ಗೌರವಕ್ಕೆ ಚ್ಯುತಿ ಬಾರದಂತೆ ನಾವು ನಡೆದುಕೊಳ್ಳಬೇಕೆಂದು ಮನವಿ ಮಾಡಿದರು. ಗ್ರಾ.ಪಂ. ಉಪಾಧ್ಯಕ್ಷೆ ಚಂದ್ರಕಲಾ ಜಯಪ್ಪ, ಸದಸ್ಯರಾದ ವಿನಾಯಕ ಮೇಗಳಮನಿ, ಕರಿಯಪ್ಪ, ಬಿ. ಪ್ರಭು, ಸೌಭಾಗ್ಯ, ನೂರ್ ಅಹ್ಮದ್, ಬಿ. ಶೇಖರಪ್ಪ, ರೇಖಮ್ಮ, ನಳಿನಾ, ಎನ್.ಜಿ. ಮಂಜನಗೌಡ, ನೂರ್ಜಾನ್, ನಾಗರಾಜಪ್ಪ, ಪಿಡಿಓ ಜಯಕುಮಾರ್, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

# ಬೆಲೆ ಏರಿಕೆಯ ಪ್ರತಿಕೃತಿ ದಹಿಸಿ ಪ್ರತಿಭಟನೆ




ದಾವಣಗೆರೆ, ಮಾ.8- ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಭಾಗವಾಗಿ ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್ ಎಸ್) ಯಿಂದ ನಗರದ ಉಪವಿಭಾಗಾಧಿಕಾರಿ ಕಚೇರಿ ಮುಂಭಾಗ ಇಂದು ಬೆಲೆ ಏರಿಕೆಯ ಪ್ರತಿಕೃತಿ ದಹನ ಮಾಡುವುದರ ಮೂಲಕ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಎಐಎಂಎಸ್ ಎಸ್ ನ ಜಿಲ್ಲಾಧ್ಯಕ್ಷೆ ಜ್ಯೋತಿ ಕುಕ್ಕುವಾಡ ಮಾತನಾಡಿ, 110 ವರ್ಷಗಳ ಹಿಂದೆ ಅಮೇರಿಕಾದಲ್ಲಿ 1908 ರಲ್ಲಿ ಗಾರ್ಮೆಂಟ್ ಗಳಲ್ಲಿ ದುಡಿಯುತ್ತಿದ್ದ 30 ಸಾವಿರ ಮಹಿಳಾ ಕಾರ್ಮಿಕರು ತಮ್ಮ ಸಂಕಷ್ಟಗಳ ವಿರುದ್ಧ ಸಿಡಿದೆದ್ದು ತ್ಯಾಗ, ಬಲಿದಾನಗಳಂತಹ ರಕ್ತದೋಕುಳಿ ಹರಿಸಿ ಹೆರಿಗೆ ರಜೆ, ದಿನಕ್ಕೆ 8 ಗಂಟೆಗಳ ದುಡಿತದ ಅವಧಿ, ಮತ ಚಲಾವಣೆ ಇತರೆ ನ್ಯಾಯಯುತ ಹಕ್ಕುಗಳನ್ನು ಗಳಿಸಿಕೊಂಡ ದಿನ. ಈ ಮಹತ್ವದ ದಿನವನ್ನು ವಿಶ್ವದಾದ್ಯಂತ ಅಂದಿನಿಂದ ಇಂದಿನವರೆಗೂ ದುಡಿಯುವ ವರ್ಗ ತಮ್ಮ ಶೋಷಣೆಯ ವಿಮುಕ್ತಿಗಾಗಿ ಸಂಕಲ್ಪ ತೊಡುವ ಹೋರಾಟದ ದಿನ ಎಂದು ತಿಳಿಸಿದರು.

ಆವಿಷ್ಕಾರ ಸಾಂಸ್ಕೃತಿಕ ವೇದಿಕೆಯ ಸಂಚಾಲಕಿ ಸುಮಾ ವಿ. ಮಠದ್ ಮಾತನಾಡಿ, ಆಹಾರ ಪದಾರ್ಥ, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲಗಳ ಬೆಲೆ ಗಗನಕ್ಕೇರಿದೆ. ಪ್ರಧಾನಿ ಮೋದಿಯವರು ಉಜ್ವಲ ಯೋಜನೆಯಡಿಯಲ್ಲಿ ಉಚಿತ ಅಡುಗೆ ಅನಿಲ ವಿತರಿಸುವ ನೆಪವೊಡ್ಡಿ ನಂತರದ ದಿನಗಳಲ್ಲಿ ನಿಧಾನವಾಗಿ ಅಡುಗೆ ಅನಿಲದ ಮೇಲಿನ ಸಬ್ಸಿಡಿ ರದ್ದುಗೊಳಿಸಿ ಮಹಿಳೆಯರನ್ನು ಸಂಕಷ್ಟಕ್ಕೆ ನೂಕಿದ್ದಾರೆ. ಮಹಿಳೆಯರ ಮತಗಳಿಂದ ರಾಜಕೀಯ ಲಾಭ ಪಡೆದು ವೋಟ್ ಬ್ಯಾಂಕ್ ಲಾಭಿ ಮಾಡುತ್ತಿದ್ದಾರೆ. ಮಹಿಳಾ ಸಬಲೀಕರಣದ ಹೆಸರಿನಲ್ಲಿ ಹೆಣ್ಣು ಮಕ್ಕಳ ಶೋಷಣೆ ನಡೆಸುತ್ತಿದ್ದಾರೆ. ಈ ಹುನ್ನಾರವನ್ನು ಅರ್ಥ ಮಾಡಿಕೊಂಡು ಶೋಷಣೆಯನ್ನು ಮೆಟ್ಟಿ ನಿಲ್ಲಬೇಕು ಎಂದು ಹೇಳಿದರು.

ಎಐಎಂಎಸ್ ಎಸ್ ರಾಜ್ಯಾಧ್ಯಕ್ಷೆ ಬಿ.ಆರ್. ಅಪರ್ಣಾ ಮಾತನಾಡುತ್ತಾ, ಕೇಂದ್ರ ಸರ್ಕಾರ ಜಾರಿಗೊಳಿಸುತ್ತಿರುವ 3 ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ಗಡಿಗಳಲ್ಲಿ ಲಕ್ಷಾಂತರ ರೈತ ಮಹಿಳೆಯರು, ಪುರುಷರಿಗೆ ಸರಿ ಸಮಾನವಾಗಿ ಹೆಗಲು ಕೊಟ್ಟು ಹಗಲಿರುಳು ಎನ್ನದೆ ಹೋರಾಟದಲ್ಲಿ ಭಾಗಿಯಾಗಿದ್ದಾರೆ. ನಾವು ಕೂಡ ಇಂತಹ ಹೋರಾಟದ ಭಾಗವಾಗಬೇಕು. ನಮ್ಮ ದೇಶದಲ್ಲಿ ಮಹಿಳೆಯರು ಅಪೌಷ್ಟಿಕತೆಯಿಂದ ಸಾವಿಗೀಡಾಗುತ್ತಿದ್ದಾರೆ. ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದಾಗಿ ಪೌಷ್ಟಿಕ ಆಹಾರಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ಬೆಲೆ ಏರಿಕೆಯ ವಿರುದ್ಧದ ಹೋರಾಟಕ್ಕೆ ದೇಶದಾದ್ಯಂತ ಮಹಿಳೆಯರು ಸಜ್ಜಾಗಬೇಕು. ಕಾರ್ಮಿಕ ವಿರೋಧಿ, ರೈತ ವಿರೋಧಿ, ಮಹಿಳಾ ವಿರೋಧಿ ಒಟ್ಟಾರೆ ದುಡಿಯುವ ವರ್ಗದ ಜನತೆಯ ವಿರೋಧಿಯಾಗಿರುವ ಈ ಬಂಡವಾಳ ವ್ಯವಸ್ಥೆಯನ್ನು ಕಿತ್ತೆಸೆದು ಕಾರ್ಮಿಕರ ರಾಜ್ಯವನ್ನು ನಿರ್ಮಾಣ ಮಾಡಲು ಪ್ರಜ್ಞಾವಂತ ರಾಜಕೀಯ ಹೋರಾಟವನ್ನು ಬೆಳೆಸಬೇಕೆಂದು ಕರೆ ನೀಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಭಾರತಿ, ಸಂಘಟನಾಕಾರರಾದ ಮಮತಾ, ಹೇಮ, ಸವಿತ, ಸಾಕಮ್ಮ, ಉಚ್ಚೆಂಗಮ್ಮ ಹಾಗೂ ವಿವಿಧ ಕಾಲೇಜುಗಳ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

## ಇಂದು - ರಾಷ್ಟ್ರೀಯ ದಂತ ವೈದ್ಯರ ದಿನ



ದೇಶವ್ಯಾಪಿ ನಡೆಯುವವು  
ವಿವಿಧ ಕಾರ್ಯಕ್ರಮ  
ದಂತ ವೈದ್ಯರಿಗಾಗಿ ಈ ದಿನ  
ಮೀಸಲು  
'ಅವಕಾಶವೊಂದು'  
ಕೃತಜ್ಞತೆಯ ಅಭಿನಂದನೆ  
ಸಲ್ಲಿಸಲು

ಮುಂಭಾಗದ ಹಲ್ಲುಗಳು ಹೆಚ್ಚಿಸುವವು ಮುಖದ ಸೌಂದರ್ಯ  
ಹಿಂಬದಿಯ ಹಲ್ಲುಗಳಿಗೆ - ಜಗಿಯುವ ಕರ್ತವ್ಯ  
ನಿಷ್ಕಲ್ಮಶ ನಗುವಿನೆಡೆಗೆ ದಂತವೈದ್ಯರ ಗಮನ  
ಪರಸ್ಪರರ ತಿಳುವಳಿಕೆಗಳಿಂದ 'ರೋಗಮುಕ್ತ ಜೀವನ'

ಸಮಸ್ಯೆಯ ಸ್ವಲ್ಪದರಲ್ಲೆ ದಂತವೈದ್ಯರ ಭೇಟಿ  
ರೋಗದ ಉಲ್ಬಣಿಕೆಯಲ್ಲಿ ಕಾಣಬಹುದು ಹತೋಟಿ  
ಪಾಲಿಸಿದರೆ ಸೂಚಿಸಿದ ಸೂಕ್ತ ಸಲಹೆ  
ದೂರಾಗುವವು ದಂತಕುಳಿ ವಸಡುಗಳ ಕಾಯಿಲೆ

ಚಿಕ್ಕ ಹುಳುಕೆಂದು ನಿರ್ಲಕ್ಷಿಸದಿರಿ  
ಹುಳುಕು ಹರಡಲು ಅದುವೇ 'ಹೆದ್ದಾರಿ'  
ಅರಿಯಿರಿ ದಂತಕುಳಿ ಸಮಸ್ಯೆಗಳ ತೀವ್ರತೆ  
ಸೂಕ್ತ ಚಿಕಿತ್ಸೆ ನೀಡುವುದು ದಂತವೈದ್ಯರ ಕಾರ್ಯಕ್ಷಮತೆ

ಅಡಿಕೆ- ತಂಬಾಕು- ಗುಟ್ಕಾಗಳಿಂದ ಆವೃತ್ತಿ  
ಬಹಳ ಬೇಗ ಪಡೆಯುವಿರಿ ಜೀವನದಿಂದ 'ನಿವೃತ್ತಿ'  
ಹಲ್ಲುಗಳ ಕಲೆ-ಕೊಳೆಗಳಿಗೆ ಹಾಕಿದರೆ ಕಡಿವಾಣ  
ವಸಡಿನ ಸಮಸ್ಯೆ ತಡೆಯುವಲ್ಲಿ ರಾಮಬಾಣ

ಹಲ್ಲುಜ್ಜಬೇಕು ಪ್ರತಿದಿನ ಎರಡು ಬಾರಿ  
ಸಿಹಿ - ಅಂಟಿನ ಪದಾರ್ಥಗಳಿಂದ ದೂರವಿರಿ  
ಪ್ರತಿ ಆರು ತಿಂಗಳಿಗೊಮ್ಮೆ ದಂತವೈದ್ಯರನ್ನು ಕಾಣಿರಿ  
ಆರೋಗ್ಯವಂತ ಹಲ್ಲು- ವಸಡುಗಳ ರಾಯಭಾರಿಗಳಾಗಿರಿ...,

**- ಡಾ . ದೀಪಶ್ರೀ ಪಿ.ಜಿ, ಡಾ.ಪ್ರಮೋದ್ ಜಿ.ವಿ.**  
ದಂತ ವೈದ್ಯರು  
ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ  
ಐಡಿಎ ದಾವಣಗೆರೆ ಶಾಖೆ, ದಾವಣಗೆರೆ

## 11 ರಂದು 'ಶಿವಸ್ಮರಣೆ' ನೃತ್ಯ ಜಾಗರಣೆ



ದಾವಣಗೆರೆ, ಮಾ.8- ನಮನ ಅಕಾಡೆಮಿ ವತಿಯಿಂದ ಮಹಾ ಶಿವರಾತ್ರಿ ಪ್ರಯುಕ್ತ ಇದೇ ದಿನಾಂಕ 11 ರಂದು ರಾತ್ರಿ 9 ರಿಂದ ಬೆಳಗಿನಜಾವ 3 ಗಂಟೆಯವರೆಗೆ ನಗರದ ವಿವಿಧ ಭಾಗಗಳಲ್ಲಿ 'ಶಿವಸ್ಮರಣೆ' ನೃತ್ಯ ಜಾಗರಣೆ ಕಾರ್ಯಕ್ರಮ ನಡೆಯಲಿದೆ ಎಂದು ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಹಾಗೂ ನೃತ್ಯ ಗುರುಗಳಾದ ಶ್ರೀಮತಿ ಮಾಧವಿ ಗೋಪಾಲಕೃಷ್ಣ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದಲ್ಲೇ ಪ್ರಥಮ ಬಾರಿಗೆ ಈ ವಿನೂತನ ಪ್ರಯೋಗವನ್ನು ಪ್ರಾರಂಭ ಮಾಡಲಿದ್ದು, ಶಿವರಾತ್ರಿ ಪ್ರಯುಕ್ತ ಅಂದು ರಾತ್ರಿ 9 ಕ್ಕೆ ರಿಂಗ್ ರಸ್ತೆಯಲ್ಲಿನ ಶ್ರೀ ಶಾರದಾ ಮಂದಿರದಲ್ಲಿ 'ಶಿವಸ್ಮರಣೆ' ನೃತ್ಯ ಜಾಗರಣೆ ಕಾರ್ಯಕ್ರಮಕ್ಕೆ ಡಾ. ಬಿ.ಟಿ. ಅಚ್ಯುತ್, ಡಾ. ಎ.ಎಂ. ಶಿವಕುಮಾರ್ ಹಾಗೂ ದಿನೇಶ್ ಕೆ. ಶೆಟ್ಟಿ ಚಾಲನೆ ನೀಡಲಿದ್ದಾರೆ ಎಂದರು.

ನಂತರ 11 ಗಂಟೆಗೆ ಜಯದೇವ ವೃತ್ತದ ಬಳಿ ಇರುವ ಕೂಡಲಿ ಶಂಕರ ಮಠದಲ್ಲಿ, ತದನಂತರ ರಾತ್ರಿ 12.30 ಕ್ಕೆ ಗೀತಾಂಜಲಿ ಚಿತ್ರಮಂದಿರದ ಪಕ್ಕದಲ್ಲಿರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಕೊನೆಯದಾಗಿ ವಿದ್ಯಾನಗರದ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ರಾತ್ರಿ 2 ಗಂಟೆಗೆ ಶಿವನಿಗೆ ನೃತ್ಯ ಸಮರ್ಪಣೆ ಮಾಡುವುದಾಗಿ ತಿಳಿಸಿದರು.

ನಮನ ಅಕಾಡೆಮಿಯ ಶಿಷ್ಯಂದಿರಾದ ನೀಲೂ ಅರೋರ ಎಸ್, ಡಾ. ಪ್ರಮಥ ಎಸ್.ಕೆ. ಕಟಾರೆ, ಮುಕ್ತ ಎಸ್. ಕಟಾರೆ, ಎನ್.ಬಿ. ಪರಿಣಿಕ, ಪ್ರಣತಿ ಬಿ.ಎನ್, ಅನನ್ಯ ಎಸ್.ಎನ್, ಸಂಜನ ಎನ್, ಚಿನ್ಮಯಿ ಜಿ. ಹಂಚಿ ನಮನಿ ಸೇರಿದಂತೆ 12 ನೃತ್ಯ ಪಟುಗಳು 'ಶಿವಸ್ಮರಣೆ' ನೃತ್ಯ ಜಾಗರಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪಿ.ಸಿ. ರಾಮನಾಥ್, ಗೋಪಾಲಕೃಷ್ಣ ಉಪಸ್ಥಿತರಿದ್ದರು.

## ಇಂದು ಜಿ.ಎಸ್.ಟಿ ಕಾರ್ಯಾಗಾರ

ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ವತಿಯಿಂದ ಇಂದು ಬೆಳಿಗ್ಗೆ 10 ಕ್ಕೆ ಬಾಪೂಜಿ ಎಂ.ಬಿ.ಎ ಕಾಲೇಜು ಸಭಾಂಗಣದಲ್ಲಿ ಜಿಎಸ್‌ಟಿ ಮಾಹಿತಿ ಕಾರ್ಯಾಗಾರ ಏರ್ಪಡಿಸಲಾಗಿದೆ.

ಬೆಂಗಳೂರು ವಾಣಿಜ್ಯ ತೆರಿಗೆ ಕಚೇರಿಯ (ಈ-ಆಡಿಟ್) ಹೆಚ್ಚುವರಿ ಆಯುಕ್ತ ಮುರುಳಿಕೃಷ್ಣ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಲಿದ್ದಾರೆ.

ಅತಿಥಿಗಳಾಗಿ ದಾವಣಗೆರೆ ವಾಣಿಜ್ಯ ತೆರಿಗೆ (ಆಡಳಿತ) ಜಂಟಿ ಆಯುಕ್ತ ರಮೇಶ್‌ಗೌಡ, ಜಂಟಿ ಆಯುಕ್ತ (ಮೇಲ್ಮನವಿ) ಶ್ರೀನಿವಾಸ್, ಬಳ್ಳಾರಿ ಜಂಟಿ ಆಯುಕ್ತ (ಜಾರಿ), ಕೃಷ್ಣಕುಮಾರ್ ದಾವಣಗೆರೆ ಜಂಟಿ ಆಯುಕ್ತ (ಜಿಎಸ್‌ಟಿ) ಪ್ರಮೋದ್ ನಾಯಕ್ ಹಾಗೂ ಸನ್ನದು ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಪಾಲ್ಗೊಳ್ಳಲಿದ್ದಾರೆ.

## ಹರಿಹರ ಎಪಿಎಂಸಿಗೆ ಶಿವಣ್ಣ ಆಯ್ಕೆ



ಮಲೇಬೆನ್ನೂರು, ಮಾ.8- ಹರಿಹರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ವರ್ತಕರ ಕ್ಷೇತ್ರದ ಉಪಚುನಾವಣೆಯಲ್ಲಿ ಹೆಚ್.ಕೆ. ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಲೇಬೆನ್ನೂರಿನ ಎಸ್.ಕೆ. ರೈಸ್ ಮಿಲ್ ಮಾಲೀಕರಾಗಿದ್ದ ಎಸ್.ಕೆ. ಅಲ್ತಾಫ್ ಅವರ ನಿಧನದಿಂದ ಈ ಸ್ಥಾನ ತೆರವಾಗಿತ್ತು. ಮಾ. 18 ಕ್ಕೆ ತೆರವಾದ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಚುನಾವಣೆಯಲ್ಲಿ ಸ್ಪರ್ಧಿಸಲು ಹೆಚ್.ಕೆ. ಶಿವಣ್ಣ ಮತ್ತು ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ ಅವರ ಸಹೋದರ ಮಾರುತಿ, ಕೊಪ್ಪ ಗ್ರಾಮದ ಗಿರೀಶ್ ಹಾಗೂ ಹಲಸಬಾಳು ಶಿವಕುಮಾರ್ ನಾಮಪತ್ರ ಸಲ್ಲಿಸಿದ್ದರು.

ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಸೋಮವಾರ ಹೆಚ್.ಕೆ. ಶಿವಣ್ಣ ಅವರನ್ನು ಹೊರತು ಪಡಿಸಿ ಉಳಿದ ಮೂವರು ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ವಾಪಸ್ ಪಡೆದಿದ್ದರಿಂದ ಶಿವಣ್ಣ ಅವರು ಅವಿರೋಧವಾಗಿ ಆಯ್ಕೆಯಾದರು. ಈ ಕುರಿತು ಇದೇ ದಿನಾಂಕ 18 ರಂದು ಅಧಿಕೃತವಾಗಿ ಫಲಿತಾಂಶ ಹೊರ ಬೀಳಲಿದೆ.

# ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಪ್ರಗತಿಯತ್ತ ಹೆಜ್ಜೆ ಇಡೋಣ

### ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜಿ.ಪಂ. ಅಧ್ಯಕ್ಷೆ ಶಾಂತಕುಮಾರಿ

ದಾವಣಗೆರೆ, ಮಾ. 8- ಮಹಿಳೆ ತನಗೆ ದೊರೆತ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು, ಸ್ವೇಚ್ಛಾಚಾರಕ್ಕೆ ಅವಕಾಶ ಮಾಡಿಕೊಡದೆ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಪ್ರಗತಿಯತ್ತ ಹೆಜ್ಜೆ ಇಡ ಬೇಕಿದೆ ಎಂದು ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಶಾಂತಕುಮಾರಿ ಶಶಿಧರ್ ಹೇಳಿದರು.



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿನೂತನ ಮಹಿಳಾ ಸಮಾಜದ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಛಾಪು ಮೂಡಿಸುವ ಶಕ್ತಿ ಹೊಂದಿದ್ದಾಳೆ. ಕಾನೂನು ಚೌಕಟ್ಟಿನಲ್ಲಿ ತನ್ನ ಸ್ವಾತಂತ್ರ್ಯ ಬಳಸಿಕೊಂಡು ಸಮಾಜದಲ್ಲಿ ಪ್ರಗತಿ ಹೊಂದಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಮಹಿಳೆಯರಿಗೆ ಪೂಜ್ಯನೀಯ ಸ್ಥಾನ ನೀಡಲಾಗಿದೆಯಾದರೂ, ಮನೆಯಲ್ಲಿಯೇ ಗಂಡು-ಹೆಣ್ಣು ಮಕ್ಕಳ ನಡುವೆ ಭೇದ ಮಾಡಲಾಗುತ್ತಿದೆ. ಪೋಷಕರು ಗಂಡು ಮಕ್ಕಳಿಗೆ ನೀಡುವ ಆದ್ಯತೆಯನ್ನು ಹೆಣ್ಣು ಮಕ್ಕಳಿಗೂ ನೀಡಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ. ಯಶೋಧ ಜವಳಗೇರಿ ಮಾತನಾಡುತ್ತಾ, ಮಹಿಳೆಯರ ಬಗ್ಗೆ ಚಿಂತಿಸುವ, ಆಲೋಚಿಸುವ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕೆಲಸಗಳು ಮಹಿಳಾ ದಿನಾಚರಣೆ ಕಾರ್ಯಕ್ರಮಗಳಲ್ಲಿ ನಡೆಯಬೇಕು ಎಂದರು.

ಮಹಿಳೆಯರು ಪುರುಷರಷ್ಟೇ ಸರಿಸಮನಾಗಿ ಕಚೇರಿಗಳಲ್ಲಿ ಕೆಲಸ ಮಾಡಿದರೂ, ಮನೆಯ ಕೆಲಸ ಹಾಗೂ ಮಕ್ಕಳ ಲಾಲನೆ-ಪಾಲನೆಯನ್ನೂ ಮಾಡಬೇಕಿದೆ. ಕೆಲಸಕ್ಕೆ ಪುರುಷನಂತೆ ಮಹಿಳೆಯರಿಗೆ ಸಮಯದ ಚೌಕಟ್ಟು ಇಲ್ಲದಿರುವುದು ದುರಂತ. ಬೆಳಿಗ್ಗೆಯಿಂದ ರಾತ್ರಿ ವರೆಗೂ ವಿಶ್ರಾಂತಿ ಇಲ್ಲದ ಜೀವನ ಸಾಗಿಸಬೇಕಿದೆ ಎಂದರು.

ಮಹಿಳೆ ಇಂದು ಸಮಾಜದಲ್ಲಿ ಸಮಾನತೆಯಿಂದ ಬಾಳುವಂತಾಗಲು ಹನ್ನೆರಡನೇ ಶತಮಾನದಲ್ಲಿ ವಚನಕಾರರ ಶ್ರಮ ಕಾರಣ ಎಂದ ಅವರು, ಅಂದಿನ ಮಹಿಳಾ ವಚನಕಾರರು ಕೇಳಿದ ಪ್ರಶ್ನೆಗಳಿಗೆ ಇಂದಿಗೂ ಪುರುಷರಲ್ಲಿ ಉತ್ತರವಿಲ್ಲ ಎಂದರು.

ಹೆಣ್ಣು ಮಕ್ಕಳ ಮೇಲೆ ತಾತ್ಸಾರ ಮನೋಭಾವ ಹೆಚ್ಚಾಗುತ್ತಿದೆ. ಕಾರಣ ಹೆಣ್ಣು ಭ್ರೂಣ ಹತ್ಯೆಗಳ ಪ್ರಮಾಣವೂ ಹೆಚ್ಚುತ್ತಿದೆ. ತನ್ನ ಜನ್ಮಕ್ಕೆ ಮಹಿಳೆಯೇ ಕಾರಣ ಎಂಬುದನ್ನೂ ಪುರುಷ ಇಂದು ಮರೆತಿದ್ದಾನೆ. ಭ್ರೂಣ ಪತ್ತೆಗೆ ಸಹಕಾರ ನೀಡುವ ಸ್ಕ್ಯಾನಿಂಗ್ ಸೆಂಟರ್‌ಗಳ ವಿರುದ್ಧ ಮಹಿಳೆಯರು ದನಿ ಎತ್ತಬೇಕಿದೆ ಎಂದರು.

ಭ್ರೂಣ ಹತ್ಯೆಯ ಪರಿಣಾಮ ಇಂದು 1000 ಜನ ಪುರುಷರಿಗೆ 900 ಮಹಿಳೆಯರಿದ್ದಾರೆ. ಮುಂದಿನ ದಿನಗಳಲ್ಲಿ ಮಹಿಳೆಯರ ಮೇಲೆ ಪುರುಷರ ದೌರ್ಜನ್ಯಗಳು ಹೆಚ್ಚಾಗಲೂ ಇದು ದಾರಿ ಮಾಡಿಕೊಡಬಹುದು. ಈ ನಿಟ್ಟಿನಲ್ಲಿ ಚಿಂತನೆ ಅಗತ್ಯ ಎಂದರು.

ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ರೇಖಾ ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಉಪಸ್ಥಿತರಿದ್ದರು. ಶೈಲಜಾ ತಿಮ್ಮೇಶ್ ಕಾರ್ಯಕ್ರಮ ನಿರೂಪಿಸಿದರು. ಕಲ್ಯಾಣಿ ತಂಡದವರು ಪ್ರಾರ್ಥಿಸಿದರು. ಮಂಜುಳಾ ನಾಗರಾಜ್ ಅತಿಥಿಗಳನ್ನು ಸ್ವಾಗತಿಸಿದರು.

ಕಾರ್ಯಕ್ರಮದ ನಂತರ ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷೆ ವೀಣಾ ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಮಹಿಳಾ ಕವಿಗೋಷ್ಠಿ ನಡೆಯಿತು.

ಕವಯತ್ರಿಯರಾದ ಡಾ. ಅನಿತಾ ದೊಡ್ಡಗೌಡ್ರು, ಸತ್ಯಭಾಮ ಮಂಜುನಾಥ್, ಚಂದ್ರಿಕಾ ಜಗನ್ನಾಥ್, ಶೋಭಾ ಮಂಜುನಾಥ್, ವೇದಾ ಅವಿನಾಶ್, ಕುಸುಮ ಲೋಕೇಶ್, ಸಾವಿತ್ರಿ ಜಗದೀಶ್, ಮಂಜುಳಾ ಸುನೀಲ್, ಶೈಲಜಾ ಪಾಟೀಲ್ ಭಾಗವಹಿಸಿದ್ದರು. ಅನ್ನಪೂರ್ಣ ಪಾಟೀಲ್ ಕವಿಗೋಷ್ಠಿ ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಯೋಗ ಗುಚ್ಛ ಕಾರ್ಯಕ್ರಮ ನಡೆಯಿತು.

## ದೆಹಲಿ ರೈತರ ಪ್ರತಿಭಟನೆಗೆ ಮಹಿಳಾ ನೇತೃತ್ವ

ನವದೆಹಲಿ, ಮಾ. 8 - ಮಹಿಳಾ ದಿನಾಚರಣೆಯ ದಿನದಂದು ರೈತರು ಪ್ರತಿಭಟನೆ ನಡೆಸುತ್ತಿರುವ ಸಿಂಘು, ಟಿಕ್ರಿ ಹಾಗೂ ಘಾಜಿಪುರಗಳಲ್ಲಿ ರೈತ ಮಹಿಳೆಯರು ನೇತೃತ್ವ ವಹಿಸಿದ್ದರು.

ಕೃಷಿ ವಲಯಕ್ಕೆ ಮಹಿಳೆಯರು ನೀಡುತ್ತಿರುವ ಕೊಡುಗೆಯನ್ನು ಪರಿಗಣಿಸಿ, ಈ ದಿನದಂದು ರೈತ ಮಹಿಳೆಯರಿಗೆ ವೇದಿಕೆ ಬಿಟ್ಟುಕೊಡಲಾಗಿತ್ತು. ವೇದಿಕೆ ನಿರ್ವಹಣೆಯನ್ನು ಮಹಿಳೆಯರಿಗೇ ವಹಿಸಲಾಗಿತ್ತು. ಸೋಮವಾರ ವೇದಿಕೆಯಲ್ಲಿ ಮಾತನಾಡಿದಎಲ್ಲರೂಮಹಿಳೆಯರೇ ಆಗಿದ್ದರು ಹಾಗೂ ಆಹಾರ ಪೂರೈಕೆ, ಭದ್ರತೆಯಂತಹ ವ್ಯವಸ್ಥೆಯನ್ನೂ ಅವರೇ ನಿರ್ವಹಿಸಿದರು.

## ಅಂಬಾನಿ ನಿವಾಸದ ಬಳಿಯ ಸ್ಫೋಟಕ ಪ್ರಕರಣ ಎನ್.ಐ.ಗೆ

ನವದೆಹಲಿ, ಮಾ. 8 - ಉದ್ಯಮಿ ಮುಕೇಶ್ ಅಂಬಾನಿ ಅವರ ನಿವಾಸದ ಬಳಿ ಸ್ಫೋಟಕ ಹೊತ್ತಿದ್ದ ವಾಹನ ಪತ್ತೆಯಾದ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ತನಿಖೆಗೆ ವಹಿಸಲಾಗಿದೆ.

ಕೇಂದ್ರ ಗೃಹ ಸಚಿವಾಲಯದ ಆದೇಶದ ಅನ್ವಯ ಎನ್.ಐ.ಎ. ಈ ಕ್ರಮ ತೆಗೆದುಕೊಂಡಿದೆ.

## ಅಶೋಕ ಟಾಕೀಸ್ ಬಳಿ ಮೇಲ್ಸೇತುವೆಗೆ ಆಗ್ರಹ : ಶಾಸ್ತ್ರಿ

ದಾವಣಗೆರೆ, ಮಾ.8- ನಗರದ ಅಶೋಕ ಟಾಕೀಸ್ ರೈಲ್ವೇ ಲೆವೆಲ್ ಕ್ರಾಸಿಂಗ್ ಬಳಿ ಮೇಲ್ಸೇತುವೆಯನ್ನು ಕಟ್ಟಿಸುವಂತೆ ನೈರುತ್ಯ ರೈಲ್ವೇ ವಲಯ ಪ್ರಯಾಣಿಕರ ಕುಂದುಕೊರತೆ ನಿವಾರಣಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಕೇಂದ್ರ ರೈಲ್ವೇ ಖಾತೆ ಸಚಿವ ಪಿಯೂಷ್ ಗೋಯಲ್ ಅವರಿಗೆ ಮನವಿ ಮೂಲಕ ಆಗ್ರಹಿಸಿದ್ದಾರೆ.

ಅವೈಜ್ಞಾನಿಕವಾಗಿ ಕೆಳ ಸೇತುವೆ ಕಟ್ಟಿಸಿದರೆ ಅಲ್ಲಿರುವ ಎಲ್ಲರೂ ಬೀದಿ ಪಾಲಾಗುತ್ತಾರೆ. ಆದರೆ, ಈ ಭಾಗದ ಸಂಸದರು 4 ವರ್ಷಗಳಿಂದ ತಾತ್ಸಾರ ಧೋರಣೆ ತಾಳುತ್ತಾ, ಈಗ ಕೆಳ ಸೇತುವೆ ಮಾಡಿಸುವ ಹುನ್ನಾರ ನಡೆಸಿ, ಸ್ಥಳದಲ್ಲಿರುವ ನೂರಾರು ಅಂಗಡಿಕಾರರಿಗೆ ತೊಂದರೆ ಕೊಡುವ ಪ್ರಯತ್ನ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ. ರೈಲ್ವೇ ಕ್ಷೇಮಾಭಿವೃದ್ಧಿ ಸಂಘದ ನೀಲಿ ನಕ್ಷೆಯಂತೆ ಮೇಲ್ಸೇತುವೆ ನಿರ್ಮಾಣದಿಂದ ಯಾರ ಆಸ್ತಿಗಳಿಗೂ ಧಕ್ಕೆ ಆಗುವುದಾಗಲೀ, ಪರಿಹಾರ ನೀಡುವುದಾಗಲೀ, ಕೋರ್ಟ್‌ಗಳಿಗೆ ತೆರಳಿ ಇಂಜಕ್ಷನ್ ಆರ್ಡರ್ ತರುವ ಅಂಶಗಳ್ಯಾವುದೂ ಬರುವುದೇ ಇಲ್ಲ. ಸಮಾನಾಂತರ ರಸ್ತೆ ಮಾಡಿಸಿದರೂ ಸಹ ಸಂಘಕ್ಕೆ ಒಪ್ಪಿಗೆ ಇದೆ ಎಂದಿದ್ದಾರೆ.

## ನಾಳೆ ಸಂತಪೌಲರ ವಿದ್ಯಾಸಂಸ್ಥೆ ವೆಬ್‌ಸೈಟ್ ಲೋಕಾರ್ಪಣೆ

ದಾವಣಗೆರೆ, ಮಾ.8- 75 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಅಮೃತ ಮಹೋತ್ಸವದ ಸಂಭ್ರಮದಲ್ಲಿರುವ ಸಂತಪೌಲರ ವಿದ್ಯಾಸಂಸ್ಥೆಯ ವೆಬ್‌ಸೈಟ್ ನಾಡಿದ್ದು ದಿನಾಂಕ 10ರ ಬೆಳಿಗ್ಗೆ 11 ಗಂಟೆಗೆ ಲೋಕಾರ್ಪಣೆಗೊಳ್ಳಲಿದೆ ಎಂದು ಸಂಸ್ಥೆಯ ಹಿರಿಯ ಶಿಕ್ಷಕಿ ಎಂ.ಕೆ. ಮಂಜುಳ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

1946 ರಲ್ಲಿ ಕೇವಲ 6 ವಿದ್ಯಾರ್ಥಿಗಳಿಂದ ಆರಂಭಗೊಂಡ ಈ ಸಂಸ್ಥೆಗೆ ಈಗ 75 ರ ಹರೆಯ. ಇದೀಗ 3 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರು.


1946 ರಲ್ಲಿ ನರ್ಸರಿ, 1947 ರಲ್ಲಿ ಪ್ರಾಥಮಿಕ, 1949 ರಲ್ಲಿ ಆಂಗ್ಲ ಮಾಧ್ಯಮ ಪೌಢಶಾಲೆ, 1963 ರಲ್ಲಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, 1971 ರಲ್ಲಿ ಬಾಲಕಿಯರ ಶಾಲೆಯಾಗಿ ಪರಿವರ್ತನೆ, 1986 ರಲ್ಲಿ ಕನ್ನಡ ಮಾಧ್ಯಮ ಪ್ರೌಢಶಾಲೆಗೆ ಅನುಮತಿ,1987 ರಲ್ಲಿ ಕನ್ನಡ ಮಾಧ್ಯಮ ಪ್ರೌಢಶಾಲೆ ಆರಂಭ, 1996 ರಲ್ಲಿ ಸುವರ್ಣ ಮಹೋತ್ಸವ ಆಚರಣೆ, 2012 ರಲ್ಲಿ ಪದವಿ ಪೂರ್ವ ಕಾಲೇಜು ನಂತರ 2019 ರಲ್ಲಿ ಸಿಬಿಎಸ್‌ಇ ವಿಭಾಗ ಪ್ರಾರಂಭಿಸಲಾಗಿದೆ ಎಂದು ವಿವರಿಸಿದರು.

ಈ ಶಾಲೆಯಲ್ಲಿ ಓದಿದ ಅನೇಕ ವಿದ್ಯಾರ್ಥಿಗಳು ಶಿಕ್ಷಣ, ಕ್ರೀಡೆ, ಸಮಾಜ ಸೇವೆ, ವೈದ್ಯಕೀಯ, ಪೊಲೀಸ್ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಅರ್ಜುನ ಪ್ರಶಸ್ತಿ ವಿಜೇತೆ ಎಂಜಲ್ ಮೇರಿ, ಖೋ-ಖೋ ಪಂದ್ಯದಲ್ಲಿ ರಾಷ್ಟ್ರಮಟ್ಟದಲ್ಲಿ ಖ್ಯಾತಿ ಗಳಿಸಿದ ಆರತಿ, ಹೃದಯ ಮೇರಿ, ಶಾಂತಾ ಪಲ್ಲಾಗಟ್ಟೆ, ಇಸ್ರೋ ವಿಜ್ಞಾನಿ ಡಾ. ಹೇಮಲತಾ, ಡಿಐಜಿ ರೂಪ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆ ಆಯುಕ್ತ ಪುಟ್ಟಮ್ಮ, ಮುಖ್ಯ ಆಯುಕ್ತ ಮುರುಘ ರಾಜೇಂದ್ರ ಚಿಗಟೇರಿ, ಪತ್ರಕರ್ತರಾದ ಪ್ರೀತಿ ನಾಗರಾಜ್, ಮಂಜುಶ್ರೀ ಕಡಕೋಳ, ಮೋಟಾರ್ ಕಾರ್ ರೇಸರ್ ಡಾ. ದೀಪ್ತಿ ಶಂಕರ್, ಚಿತ್ರನಟಿ ಚಿಂದೋಡಿ ತ್ರಿವೇಣಿ, ನಂದಿನಿ ರಾಮಣ್ಣ (ಭಾವನಾ), ಪ್ರಿಯಾ ಜೆ. ಆಚಾರ್, ಸಂಗೀತ ಕ್ಷೇತ್ರದ ವಾಣಿ ಸತೀಶ್, ಶೃತಿ ಪ್ರಶಾಂತ್, ಲಕ್ಷ್ಮಿ, ರಕ್ಷಾ, ರಾಜಕೀಯ ಕ್ಷೇತ್ರದ ಬಿ.ಪಿ. ಹರೀಶ್, ದಿನೇಶ್ ಕೆ. ಶೆಟ್ಟಿ, ಜಯ್ಯಮ್ಮ, ಪುಷ್ಪಾ ವಾಲಿ ಸೇರಿದಂತೆ ಅನೇಕರು ಈ ಶಾಲೆ ಹಳೆಯ ವಿದ್ಯಾರ್ಥಿಗಳಾಗಿದ್ದು ಹೆಮ್ಮೆಯ ಸಂಗತಿಯಾಗಿದೆ.


ಪತ್ರಿಕಾಗೋಷ್ಠಿಯಲ್ಲಿ ಅನುಪಮ, ಬರ್ನಿ, ಸುಜೆಯ, ರಿನಿ, ನಿರ್ಮಲ, ರಾಧಾ, ಜಸ್ಸಿ, ಜಯಮ್ಮ ಮತ್ತಿತರರಿದ್ದರು.

### ಬಿಳಿಚೋಡು ಜಿ. ಎಸ್. ಶಿವಾನಂದಗೌಡ್ರು ನಿಧನ



ದಾವಣಗೆರೆ ಜಿ॥ ಜಗಳೂರು ತಾ॥ ಬಿಳಿಚೋಡು ಗ್ರಾಮದ ವಾಸಿ ಶ್ರೀ ಜಿ. ಎಸ್. ಶಿವಾನಂದಗೌಡ್ರು ಅವರು ದಿನಾಂಕ 08.03.2021ರ ಸೋಮವಾರ ಸಂಜೆ 4.50 ಕ್ಕೆ ನಿಧನರಾದರು. ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.03.2021ರ ಮಂಗಳವಾರ ಮಧ್ಯಾಹ್ನ 12.30 ಕ್ಕೆ ಬಿಳಿಚೋಡು ಗ್ರಾಮದಲ್ಲಿ ನೆರವೇರಲಿದೆ.

### ಸರೋಜಮ್ಮ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ ವಾಸಿ ದಿ.ಹರಿಹರದ ಚನ್ನಬಸಪ್ಪ ಇವರ ಧರ್ಮಪತ್ನಿ ಶ್ರೀಮತಿ ಸರೋಜಮ್ಮ (85) ಅವರು ದಿನಾಂಕ 8.03.2021 ರಂದು ಸೋಮವಾರ ಸಂಜೆ 4 ಗಂಟೆಗೆ ನಿಧನರಾಗಿದ್ದಾರೆ. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.03.2021 ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ಕೆರೆಯಾಗಳಹಳ್ಳಿ ಕೆ.ಜಿ. ಸುರೇಶ್ ನಿಧನ



ದಾವಣಗೆರೆ ತಾಲ್ಲೂಕು ಕೆರೆಯಾಗಳಹಳ್ಳಿ ಗ್ರಾಮದ ಇಂಜಿನಿಯರ್ **ಶ್ರೀ ಕೆ.ಜಿ. ಸುರೇಶ್** ಅವರು ದಿನಾಂಕ 07.03.2021ರ ಭಾನುವಾರ ಸಂಜೆ 7.40 ಕ್ಕೆ ಸೌದಿ ಅರೇಬಿಯಾದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 43 ವರ್ಷ ವಯಸ್ಸಾಗಿತ್ತು. ಪತ್ನಿ, ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09.03.2021ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಸೌದಿ ಅರೇಬಿಯಾದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು, ವೀರೇಂದ್ರ, ಪಾಟೀಲ್, ಕೆರೆಯಾಗಳಹಳ್ಳಿ ಮತ್ತು ಕೆರೆಯಾಗಳಹಳ್ಳಿ ಗೌಡ್ರು ವಂಶಸ್ಥರು, ಗ್ರಾಮಸ್ಥರು

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮಾರ್ಚ್ 09, 2021


# ಹೊಸ ತೆರಿಗೆ ಹೇರದ ಸಾಲದ ಬಜೆಟ್

## ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ, ಮಹಿಳಾ ಶಿಕ್ಷಣ, ನಗರಾಭಿವೃದ್ಧಿಗೆ ಒತ್ತು

ಬೆಂಗಳೂರು, ಮಾ. 8- ಕೊರೊನಾ ಸಾಂಕ್ರಾಮಿಕ ದಿಂದ ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿಯ ಪುನಶ್ಚೇತನಕ್ಕೆ ಹೊಸ ತೆರಿಗೆಯ ಹೊರೆ ಹೇರದೆ, ಹೊಸ ಕಾರ್ಯಕ್ರಮಗಳನ್ನೂ ಪ್ರಕಟಿಸದೆ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಮುಂಗಡ ಪತ್ರದಲ್ಲಿ ಅಭಿವೃದ್ಧಿ ಮಂತ್ರವನ್ನು ಜಪಿಸಿದ್ದಾರೆ.

ವಿಧಾನಸಭೆಯಲ್ಲಿಂದು 2021-22 ನೇ ಸಾಲಿನ ಮುಂಗಡ ಪತ್ರ ಮಂಡಿಸಿದ ಅವರು, ಕೊರೊನಾ ತಲ್ಲಣಗಳ ನಡುವೆಯೂ, ಇಷ್ಟರ ನಡುವೆಯೂ ಕಳೆದ ಬಾರಿಗಿಂತ ಈ ಬಾರಿಯ ವಿತ್ತೀಯ ಗಾತ್ರವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿದ್ದಾರೆ.

ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ, ಮಹಿಳೆಯರ ಶಿಕ್ಷಣ, ನಗರಾಭಿವೃದ್ಧಿ, ನೀರಾವರಿಗೆ ಹೆಚ್ಚಿನ ಒತ್ತು ನೀಡಿರುವ ಮುಖ್ಯಮಂತ್ರಿ, 2.46 ಲಕ್ಷ ಕೋಟಿ ರೂ. ಗಾತ್ರದ 2021-22 ನೇ ಸಾಲಿನ ಬಜೆಟ್ ಮಂಡಿಸಿದ್ದಲ್ಲದೆ, ಮಾರ್ಚ್ 31, 2022 ರವರೆಗಿನ ವೆಚ್ಚ ನಿರ್ವಹಣೆಗೆ ಪೂರ್ಣ ಆಯವ್ಯಯಕ್ಕೆ ಅಂಗೀಕಾರ ಕೋರಿದ್ದಾರೆ.

ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಹೊಸ ತೆರಿಗೆ ಪ್ರಸ್ತಾಪ ಮಾಡದಿದ್ದರೂ, ಮಠ-ಮಾನ್ಯ, ಸಂಘ-ಸಂಸ್ಥೆಗಳಿಗೆ ಅನುದಾನ ಇಲ್ಲವೇ ಕಾರ್ಯಕ್ರಮ ಘೋಷಿಸುವ ಮೂಲಕ ವಿವಿಧ ಸಮಾಜಗಳನ್ನು ತೃಪ್ತಿಪಡಿಸುವ ಪ್ರಯತ್ನ ಮಾಡಿದ್ದಾರೆ.

ಕೊರೊನಾದಿಂದ 10 ತಿಂಗಳ ಅವಧಿಯಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ತೀವ್ರ ಹದಗೆಟ್ಟಿತ್ತು, ರಾಜಸ್ವ ಸಂಗ್ರಹಣೆ ಆಯವ್ಯಯದ ಅಂದಾಜು ತಲುಪುವ ನಿರೀಕ್ಷೆ ಇರಲಿಲ್ಲ, ಈಗ ಮಂದಗತಿಯಲ್ಲಿ ಏರಿಕೆ ಕಾಣುತ್ತಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಆದಾಯದ ಸಂಗ್ರಹದ ಕೊರತೆ ಕಾರಣ ವಾರ್ಷಿಕ ಆದಾಯ ಮತ್ತು ವೆಚ್ಚಗಳಲ್ಲಿ ಅಸಮತೋಲನ ಉಂಟಾಗಿದೆ ಎಂದು ಒಪ್ಪಿಕೊಂಡಿರುವ ಯಡಿಯೂರಪ್ಪ, ಕಳೆದ ಸಾಲಿನಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಿದ ಹಣದಲ್ಲಿ ಕೊರತೆ ಮಾಡದಿದ್ದರೂ, ಅಲ್ಲಿಯೇ ಕೆಲವು ಬದಲಾವಣೆ ಮಾಡಿ, ಇರುವ ಆದಾಯದಲ್ಲೇ ಹೊಸ ಕಾರ್ಯಕ್ರಮ ನೀಡುವ ಪ್ರಯತ್ನ ಮಾಡಿದ್ದಾರೆ.

ಈ ಬಾರಿ 71,332 ಕೋಟಿ ರೂ.ಗಳನ್ನು ಸಾಲವಾಗಿ ಪಡೆಯ ಲಾಗುವುದು ಎಂದು ಘೋಷಿಸಿರುವ ಯಡಿಯೂರಪ್ಪ, ವಿತ್ತೀಯ ನಿರ್ವಹಣಾ ಕಾಯ್ದೆಯ ನಿಯಮ ಸಡಿಲಿಸಿ ಶೇ. 5ರಷ್ಟು ಸಾಲ ಪಡೆಯಲು ಕೇಂದ್ರ ಸರ್ಕಾರ ಅನುವು ಮಾಡಿಕೊಟ್ಟಿದೆ. ಆದರೆ, ಶೇ. 4ಕ್ಕೂ ಹೆಚ್ಚಿನ ಸಾಲ ಪಡೆಯದಿರಲು ತೀರ್ಮಾನಿಸಲಾಗಿದೆ ಎಂದಿದ್ದಾರೆ.

ರಾಜ್ಯದ ಸಾಲದ ಮೇಲಿನ ಮರುಪಾವತಿ ಪ್ರಮಾಣ ಏರಿಕೆಯಾಗಿರುವುದನ್ನು ಪ್ರಸ್ತಾಪಿಸಿದ ಅವರು, ಸಾಲದ ಮೇಲಿನ ಅಸಲು, ಬಡ್ಡಿ ಹಾಗೂ ಚಕ್ರಬಡ್ಡಿಗಾಗಿ ಈ ವರ್ಷ 14,565 ಕೋಟಿ ರೂ. ಪಾವತಿಸಬೇಕಿದೆ ಎಂದರು.

ಬಜೆಟ್‌ಗೆ ಅಗತ್ಯವಾದ ಹಣದ ಪೈಕಿ ಶೇ. 29 ರಷ್ಟನ್ನು ಸಾಲಗಳ ಮೂಲಕ, ಶೇ. 50 ರಷ್ಟನ್ನು (4ನೇ ಪುಟಕ್ಕೆ)



### ಕೊರೊನಾ ನಡುವೆಯೂ ಆಹಾರ ಉತ್ಪಾದನೆಯಲ್ಲಿ ದಾಖಲೆ: ಸಿಎಂ

ಬೆಂಗಳೂರು, ಮಾ. 8 - ಕೊರೊನಾ ಸಾಂಕ್ರಾಮಿಕ ಹಠಾತ್ ದಾಳಿಯಿಂದ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡು ಪ್ರಗತಿಯಲ್ಲಿ ಹಿನ್ನಡೆ ಅನುಭವಿಸಿದರೂ ಆಹಾರ ಉತ್ಪಾದನೆಯಲ್ಲಿ ರಾಜ್ಯ ನೂತನ ದಾಖಲೆ ಬರೆದಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಧಾನಸಭೆಯಲ್ಲಿಂದು ಘೋಷಣೆ ಮಾಡಿದ್ದಾರೆ.

2021-22 ನೇ ಸಾಲಿನ ಮುಂಗಡ ಪತ್ರ ಮಂಡಿಸಿದ ಅವರು, ಕೊರೊನಾ ಮಧ್ಯೆಯೇ ರಾಜ್ಯದಲ್ಲಿ ಅತಿವೃಷ್ಟಿ ಉಂಟಾಗಿ ಶೇ. 20ರಷ್ಟು ಬೆಳೆ ನಷ್ಟವಾದರೂ 1.04 ಲಕ್ಷ ಟನ್ ಅಧಿಕ ಬೆಳೆ ಬಂದಿದೆ ಎಂದರು. ಯುವಕರನ್ನು ಕೃಷಿ ಚಟುವಟಿಕೆಗೆ (4ನೇ ಪುಟಕ್ಕೆ)

### ಜಿಲ್ಲೆಗೆ ಹೃದ್ರೋಗ ಉಪ ಕೇಂದ್ರ, ಬಿಟ್ಟು ಬೇರೇನೂ ಇಲ್ಲ

#### ವೈದ್ಯಕೀಯ ಕಾಲೇಜಿನ ನಿರೀಕ್ಷೆ ಮತ್ತೆ ಹುಸಿ, ಮುಂದುವರೆದ ನಿರಾಸೆ

ದಾವಣಗೆರೆ, ಮಾ. 8 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಂಡಿಸಿರುವ ಬಜೆಟ್‌ನಲ್ಲಿ ದಾವಣಗೆರೆಯಲ್ಲಿ 50 ಹಾಸಿಗೆ ಸಾಮರ್ಥ್ಯದ ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ಉಪಕೇಂದ್ರವನ್ನು 20 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಸುವುದಾಗಿ ಪ್ರಕಟಿಸಲಾಗಿದೆ.

ಇದನ್ನು ಹೊರತು ಪಡಿಸಿದರೆ ಬಜೆಟ್‌ನಲ್ಲಿ ಜಿಲ್ಲೆಗೆ ಯಾವುದೇ ಹೊಸ ಯೋಜನೆಗಳು ದೊರೆತಿಲ್ಲ.

ಭದ್ರಾ ಮೇಲ್ದಂಡೆ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸುವ ಮೂಲಕ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಗಳ ರೈತರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ. ಆದರೆ, ಈ ಯೋಜನೆಯಿಂದ ದಾವಣಗೆರೆ ಜಿಲ್ಲೆಗೆ ಆಗುವ ಉಪಯುಕ್ತತೆ ಬೇರೆ ಜಿಲ್ಲೆಗಳಿಗಿಂತ ತೀರಾ ಕಡಿಮೆ ಇದೆ.

ನಿರ್ಮಾಣ ಕಾರ್ಮಿಕರು ವಸತಿ ಸಮಸ್ಯೆ ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ದಾವಣಗೆರೆಯಲ್ಲಿ ಸುಸಜ್ಜಿತವಾದ ತಾತ್ಕಾಲಿಕ ವಸತಿ ಗೃಹ ಸೌಲಭ್ಯ ಕಲ್ಪಿಸಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ. (4ನೇ ಪುಟಕ್ಕೆ)

**ದಾವಣಗೆರೆಗೆ 50 ಹಾಸಿಗೆ ಸಾಮರ್ಥ್ಯದ ಜಯದೇವ ಹೃದ್ರೋಗ ಆಸ್ಪತ್ರೆಯ ಉಪಕೇಂದ್ರವನ್ನು ಸ್ಥಾಪಿಸಲು 20 ಕೋಟಿ ರೂ. ಅನುದಾನ ನೀಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಧನ್ಯವಾದ.**

**- ಜಿ.ಎಂ.ಸಿದ್ದೇಶ್ವರ, ಸಂಸದ**

### ಮನೆ ನಿರ್ಮಾಣಕ್ಕೆ 10 ಸಾವಿರ ಕೋಟಿ ರೂ.

ಬೆಂಗಳೂರು, ಮಾ. 8 - ಪ್ರಗತಿಯಲ್ಲಿರುವ 9.74 ಲಕ್ಷ ಮನೆಗಳನ್ನು ಮುಂದಿನ 3 ವರ್ಷಗಳಲ್ಲಿ ಪೂರ್ಣಗೊಳಿಸಲು 10,194 ಕೋಟಿ ರೂ. ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ಅನುಮೋದನೆಗೊಂಡು ಹಲವು ವರ್ಷಗಳಿಂದ ಪ್ರಾರಂಭವಾಗದೆ ಬಾಕಿ ಇದ್ದ ಮನೆಗಳನ್ನು ಪೂರ್ಣಗೊಳಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಬಜೆಟ್ ಮಂಡನೆ ವೇಳೆ ತಿಳಿಸಿದ್ದಾರೆ. ಕಾರ್ಮಿಕರ ಮಕ್ಕಳ ರಕ್ಷಣೆಗೆ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ 100 ಕಿತ್ತೂರು ರಾಣಿ ಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು, ಕಟ್ಟಡ ಕಾರ್ಮಿಕರು ಮತ್ತು ಅವಲಂಬಿತರ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಗೆ 25 ಸಂಚಾರಿ ಆರೋಗ್ಯ ತಪಾಸಣಾ ಕೇಂದ್ರಗಳನ್ನು ಆರಂಭಿಸಲಾಗುವುದು. ರಾಜ್ಯದ 4 ವಿಭಾಗಗಳಲ್ಲಿ ತಾಯಂದಿರ ಎದೆಹಾಲಿನ ಬ್ಯಾಂಕ್‌ಗಳನ್ನು 2.5 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲು (4ನೇ ಪುಟಕ್ಕೆ)

### ಆರು ತಿಂಗಳ ಆರೈಕೆ ರಜೆ, ಮಹಿಳಾ ಯೋಜನೆಗಳಿಗೆ 37 ಸಾವಿರ ಕೋಟಿ ರೂ.

**ಬೆಂಗಳೂರು, ಮಾ. 8 - ವಿಶ್ವ ಮಹಿಳಾ ದಿನದಂದೇ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಹಿಳೆಯರ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಘೋಷಿಸಿದ್ದಾರೆ. ಇದರಲ್ಲಿ ಸರ್ಕಾರಿ ಮಹಿಳಾ ನೌಕರರಿಗೆ ಆರು ತಿಂಗಳು ಶಿಶು ಆರೈಕೆ ರಜೆ ಘೋಷಣೆ ಸಹ ಸೇರಿದೆ. ಸ್ವಯಂ ಉದ್ಯೋಗಿಗಳಿಗೆ ಸಾಲ, ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಸೇರಿದಂತೆ ಮಹಿಳಾ ಉದ್ದೇಶಿತ ಯೋಜನೆಗಳಿಗಾಗಿ ಪ್ರಸಕ್ತ ವರ್ಷ 37,188 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ರಾಜ್ಯ ಸರ್ಕಾರದ ಮಹಿಳಾ ಉದ್ಯೋಗಿಗಳಿಗೆ ಈಗಾಗಲೇ ಅಸ್ತಿತ್ವದಲ್ಲಿ ರುವ 6 ತಿಂಗಳ ಹೆರಿಗೆ ರಜೆಯೊಂದಿಗೆ ಆರು ತಿಂಗಳು ಮಕ್ಕಳ ಆರೈಕೆ ರಜೆ** (4ನೇ ಪುಟಕ್ಕೆ)

### ಒಕ್ಕಲಿಗ ನಿಗಮ ಸ್ಥಾಪನೆ; 500 ಕೋ.ರೂ. ಅನುದಾನ

**ಬೆಂಗಳೂರು, ಮಾ. 8 - ಒಕ್ಕಲಿಗ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ನಿಗಮ ಸ್ಥಾಪಿಸುವುದಾಗಿ ಪ್ರಕಟಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಇದರ ಚಟುವಟಿಕೆಗಳಿಗೆ 500 ಕೋಟಿ ರೂ. ವೆಚ್ಚ ಮಾಡಲು ಯೋಜಿಸಲಾಗಿದೆ ಎಂದು ಹೇಳಿದ್ದಾರೆ. ವಿಧಾನಸಭೆಯಲ್ಲಿಂದು 2021-22ನೇ ಸಾಲಿನ ಮುಂಗಡ ಪತ್ರ ಮಂಡಿಸಿ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಅವರು, ಸಮುದಾಯದ ಬೇಡಿಕೆಯಂತೆ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದರು.**

**ವೀರಶೈವ-ಲಿಂಗಾಯತ ಸಮಾಜದ ಸಮಗ್ರ ಅಭಿವೃದ್ಧಿಗಾಗಿ ಈಗಾಗಲೇ ಹೊಸ ನಿಗಮ ಸ್ಥಾಪಿಸಿದ್ದು, ಇದಕ್ಕೆ 500 ಕೋಟಿ ರೂ. ಅನುದಾನ ನಿಗದಿಪಡಿಸಿ, 100 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದಿರುವ ಯಡಿಯೂರಪ್ಪ, ರಾಜ್ಯದಲ್ಲಿನ ಬಡ, ಹಿಂದುಳಿದ ಮತ್ತು ಶೋಷಿತ ಸಮುದಾಯಗಳ** (4ನೇ ಪುಟಕ್ಕೆ)

### ಪಾಲಿಕೆಗಳಲ್ಲಿ ಪ್ರಾಯೋಗಿಕವಾಗಿ ಸಂಜೆ ಕಾಲೇಜುಗಳ ಆರಂಭ

**ಸರ್ಕಾರಿ, ಬ್ಯಾಂಕ್, ರೈಲ್ವೆ ಹುದ್ದೆಗಳಿಗೆ ತರಬೇತಿ**

ಬೆಂಗಳೂರು, ಮಾ. 8 - ಕೇಂದ್ರ ಮತ್ತು ರಾಜ್ಯ ಆಡಳಿತ ಸೇವೆಗಳು, ಬ್ಯಾಂಕಿಂಗ್, ರೈಲ್ವೆ ಇತ್ಯಾದಿ ಉದ್ಯೋಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರ ಸ್ಪರ್ಧೆಯನ್ನು ಉತ್ತೇಜಿಸಲು 'ಸಾಮರ್ಥ್ಯ - ಸಾರಥ್ಯ' ಎಂಬ ಕಾರ್ಯಕ್ರಮದಡಿ 5 ಲಕ್ಷ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ನೀಡುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಧಾನಸಭೆಯಲ್ಲಿಂದು ಪ್ರಕಟಿಸಿದ್ದಾರೆ.

ಈ ಕಾರ್ಯಕ್ರಮಕ್ಕಾಗಿ 2021-22ರ ಆರ್ಥಿಕ ವರ್ಷದಲ್ಲಿ 5 ಕೋಟಿ ರೂ. ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಜಾಗತಿಕ ಮಟ್ಟದ ಅತ್ಯುತ್ತಮ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಶೈಕ್ಷಣಿಕ ನಾಯಕತ್ವ ಎಂಬ ವಿನೂತನ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದರಿಂದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಬೋಧನಾ ಪದ್ಧತಿಯ ಸುಧಾರಣೆ, ಬಹುಶಿಸ್ತೀಯ ಅಧ್ಯಯನ, ಸಂಶೋಧನೆಯಲ್ಲಿ ನಾವೀನ್ಯತೆ ಹಾಗೂ ನಾಯಕತ್ವ ನಿರ್ಮಾಣದಲ್ಲಿ ವಿಶೇಷ ಪರಿಣಿತಿ ಸಾಧಿಸಲು (4ನೇ ಪುಟಕ್ಕೆ)

### ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ : ಸಿಎಂ

ಬೆಂಗಳೂರು, ಮಾ. 8 - ರಾಜ್ಯದಲ್ಲಿ 5,500 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯಕ್ಷಮತೆ ಹೆಚ್ಚಿಸಲು 198 ಕೋಟಿ ರೂ. ವೆಚ್ಚದಲ್ಲಿ ಗಣಕೀಕರಣಗೊಳಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ಆಯವ್ಯಯದಲ್ಲಿ ಈ ವಿಷಯ ಪ್ರಸ್ತಾಪಿಸಿರುವ ಅವರು, ಡಿಸಿಸಿ ಬ್ಯಾಂಕ್‌ನಲ್ಲಿ ಸರ್ಕಾರದ ಸಹಭಾಗಿತ್ವ ಷೇರು ಬಂಡವಾಳ ಹೆಚ್ಚಿಸುವ ಉದ್ದೇಶದಿಂದ 21 ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳಿಗೆ 10 ಲಕ್ಷ ರೂ.ಗಳ ಗರಿಷ್ಠ ಮಿತಿಗೊಳಪಟ್ಟು ಶೇ.25ರಷ್ಟು ಷೇರು ಬಂಡವಾಳ ನೀಡಲಾಗುವುದು ಎಂದರು.

ಕೃಷಿ ಉತ್ಪನ್ನಗಳನ್ನು ಉಗ್ರಾಣ ನಿಗಮ, ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು, ಟಿಎಪಿಸಿಎಂಎಸ್ ಹಾಗೂ ಇತರೆ ಸಹಕಾರ ಸಂಸ್ಥೆಗಳ ಗೋದಾಮುಗಳಲ್ಲಿ ಸಂಗ್ರಹಿಸಿಡಲು ರೈತರು ಪಾವತಿಸುವ ಸಂಗ್ರಹಣಾ ಶುಲ್ಕದಲ್ಲಿ ಶೇ.25ರಷ್ಟು ಸಹಾಯ ಧನವನ್ನು ಸರ್ಕಾರ ನೀಡಲಿದೆ, ಈ ಉದ್ದೇಶಕ್ಕಾಗಿ 25 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ.

ಗೋಹತ್ಯೆ ತಡೆ ಹಾಗೂ ಜಾನುವಾರುಗಳ ಸಂರಕ್ಷಣೆಗೆ ಪ್ರತಿ ಜಿಲ್ಲೆಗೆ ಒಂದರಂತೆ ಗೋಶಾಲೆ ತೆರೆಯಲಾಗುವುದು, ಜಾನುವಾರುಗಳ ಶಾಶ್ವತ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಯೊಂದಿಗೆ ಮಾಹಿತಿ ಮತ್ತು ತರಬೇತಿ ನೀಡಲು ಹೆಸರಘಟ್ಟದ 100 ಎಕರೆ ಪ್ರದೇಶದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಥೀಮ್ ಪಾರ್ಕ್ ಸ್ಥಾಪಿಸಲಾಗುವುದು. ಶಿವಮೊಗ್ಗ ವೈದ್ಯಕೀಯ ಕಾಲೇಜಿನಲ್ಲಿ ಔಷಧ ಗಿಡಗಳ ಸಂಶೋಧನಾ ಕೇಂದ್ರವನ್ನು 2 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುವುದು ಎಂದು ಹೇಳಿದರು.

## ಮಹಿಳೆಗೆ ಸಾಧನೆಯೊಂದಿಗೆ ಅಸಮಾನತೆ ನಿವಾರಿಸುವ ಸವಾಲಿದೆ : ಶಾಂತಕುಮಾರಿ



ದಾವಣಗೆರೆ, ಮಾ. 8 - ಮಹಿಳೆಯರು ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು, ಹೆಣ್ಣು ಅಬಲೆಯಲ್ಲ ಸಬಲೆ ಎಂದು ಸಾಬೀತುಪಡಿಸುತ್ತಿದ್ದಾಳೆ. ಮಹಿಳಾ ಸ್ವಾತಂತ್ರ್ಯವನ್ನು ಧನಾತ್ಮಕವಾಗಿ ಹಾಗೂ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಬಳಸಿಕೊಂಡು ಮುನ್ನಡೆಯಬೇಕಿದೆ ಎಂದು ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಕೆ.ವಿ.ಶಾಂತಕುಮಾರಿ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಇಲಾಖೆ ದಾವಣಗೆರೆ ತಾಲ್ಲೂಕು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ, ಒನ್ ಸ್ಟಾಪ್ ಸೆಂಟರ್ (ಸಖಿ), ಮಹಿಳಾ ಶಕ್ತಿ ಕೇಂದ್ರ, ಸ್ತ್ರೀಶಕ್ತಿ ಒಕ್ಕೂಟ, ಮಹಿಳಾ ಸಹಾಯವಾಣಿ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾ ಚರಣೆ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

**ನರೇಗಾ ಕಾರ್ಯಕ್ರಮದಡಿ ವಿಶೇಷವಾಗಿ ಈ ಬಾರಿ ಮಹಿಳಾ ಕಾಯಕೋತ್ಸವವನ್ನು ಆಯ್ದ ಗ್ರಾ.ಪಂ.ಗಳಲ್ಲಿ ಮಾಡುತ್ತಿದ್ದು, ಮಹಿಳಾ ಪ್ರಧಾನ ಕುಟುಂಬಗಳ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಬೇಕು. ಆಡಳಿತದಲ್ಲಿ ಮಹಿಳೆಯರ ಸಂಖ್ಯೆ ಮತ್ತು ಪಾತ್ರವನ್ನು ಹೆಚ್ಚಿಸಲು ಮಹಿಳಾ ಸ್ನೇಹಿ ಗ್ರಾ.ಪಂ ಅಭಿಯಾನ ಮತ್ತು ವಿಶೇಷ ಸಭೆಗಳನ್ನು ಈ ತಿಂಗಳ ಅಂತ್ಯದವರೆಗೆ ಕೈಗೊಳ್ಳಲಾಗುವುದು.**

**- ಡಾ. ವಿಜಯ ಮಹಾಂತೇಶ ಬಿ.ದಾನಮ್ಮನವರ, ಜಿ.ಪಂ ಸಿಇಓ**

ಮೊದಲೆಲ್ಲ ಮಹಿಳೆಯನ್ನು ಮಕ್ಕಳನ್ನು ಹೆರುವ ಯಂತ್ರದಂತೆ, ಆಳಿನಂತೆ ಕೀಳಾಗಿ ಕಾಣಲಾಗುತ್ತಿತ್ತು. ಆದರೆ ಇತ್ತೀಚಿಗೆ ಸ್ವಲ್ಪ ಬದಲಾವಣೆ ಕಾಣುತ್ತಿದೆ. ಹೆಣ್ಣು (4ನೇ ಪುಟಕ್ಕೆ)

### ಸಾಧಕರಿಗೆ ಸನ್ಮಾನ

**ಈ ಸಂದರ್ಭದಲ್ಲಿ ಕೊರೊನಾ ತಡೆ ಅಭಿಯಾನಕ್ಕಾಗಿ ಕೇಂದ್ರ ಸರ್ಕಾರದಿಂದ ಇತ್ತೀಚಿಗೆ ದೆಹಲಿಯಲ್ಲಿ ಪ್ರಶಸ್ತಿ ಪಡೆದ ಹೊನ್ನಾಳಿ ತಾಲ್ಲೂಕಿನ ಬಿದರಹಳ್ಳಿ ತಾಂಡಾದ ಅಂಗನವಾಡಿ ಕಾರ್ಯಕರ್ತೆ ಶಶಿಕಲಾ. ಎನ್ ಹಾಗೂ ವಿಶೇಷ ಚೇತನರಾದರೂ 250ಕ್ಕೂ ಹೆಚ್ಚು ಮಕ್ಕಳು ಸ್ವಾವಲಂಬಿಗಳಾಗಲು ನೆರವಾದ ಸಾಂತ್ವನ ಕೇಂದ್ರದ ಅಧ್ಯಕ್ಷೆ ಹೆಚ್.ಅನಿತಾ ಪಾಟೀಲ್ ಅವರನ್ನು ಸನ್ಮಾನಿಸಲಾಯಿತು.**

**ಜಿಲ್ಲಾ ಮಟ್ಟದ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಗೈದ ಮಕ್ಕಳಾದ ಎಂ.ಹೆಚ್. ಕೀರ್ತನ, ಎಸ್.ಡಿ ಸೈಫುದ್ದೀನ್, ಎಸ್. ವೇಣುಗೋಪಾಲ್, ಎಸ್. ಯಶ್‌ರಾಜ್, ಜಿ.ಜೆ.ಮನುಶ್ರೀ ಹಾಗೂ ವೈಷ್ಣವಿ.ಆರ್.ಭಾರಧ್ವಾಜ್ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.**

## ಮಹಿಳೆಯರು ಅಸೂಯೆ ಬಿಟ್ಟರೆ ಬೆಳವಣಿಗೆ ಸಾಧ್ಯ

### ಹರಿಹರದಲ್ಲಿ ಶ್ರೀ ಶಾರದೇಶಾನಂದ ಜೀ ಕಿವಿಮಾತು



ಹರಿಹರ, ಮಾ.8- ಸಮಾಜದಲ್ಲಿ ಮಹಿಳೆ ಯರು ಅಸೂಯೆ, ಹೊಟ್ಟೆಕಿಚ್ಚಿನ ಭಾವನೆ ಗಳನ್ನು ಬಿಟ್ಟರೆ ಸಾವಿತ್ರಿ ಬಾಯಿ ಫುಲೆ, ಶಾರದಾ ದೇವಿಯಂತೆ ಬೆಳವಣಿಗೆಯ ಹಾದಿ ಯಲ್ಲಿ ಸಾಗುವುದಕ್ಕೆ ದಾರಿಯಾಗುತ್ತದೆ ಎಂದು ರಾಮಕೃಷ್ಣ ಆಶ್ರಮದ ಶ್ರೀ ಶಾರದೇಶಾನಂದ ಸ್ವಾಮಿಗಳು ಕಿವಿ ಮಾತು ಹೇಳಿದರು.

ನಗರದ ರಾಜಾರಾಮ ಕಾಲೋನಿ ಶ್ರೀರಾಮ ಮಂದಿರದ ಸಭಾಂಗಣದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವ ಸಹಾಯ ಸಂಘದ ವತಿಯಿಂದ ನಡೆದ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮ ಮತ್ತು 'ನಮ್ಮೊಳಗಿನ ಮಹಿಳಾ ಸಾಧಕಿಯರು' ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಅವರು ಮಾತನಾಡಿದರು.

ಮನಸ್ಸು ಮಾನಸಿಕವಾಗಿ ಜೀರ್ಣವಾಗದೆ ಇದ್ದಾಗ ಅಸೂಯೆ ಹೊಟ್ಟೆಕಿಚ್ಚಿನ ಭಾವನೆಗಳು ಹುಟ್ಟಿ ಇದರಿಂದಾಗಿ ಮನಸ್ಸಿನಲ್ಲಿ ಕೆಟ್ಟದಾಗಿ ಆಲೋಚನೆ ಬರುವುದಕ್ಕೆ ದಾರಿಯಾಗುತ್ತದೆ. ಮಹಿಳೆಯರು ಸ್ವಾಭಿಮಾನ ದಿಂದ ಬದುಕಿ ದಾಗ ಬದುಕಿಗೊಂದು ಪ್ರೇರಣೆ ಸಿಗುತ್ತದೆ. ಇನ್ನೊಬ್ಬರ ಬದುಕನ್ನು ನೋಡಿ ಹೋಲಿಕೆ ಮಾಡಿಕೊಂಡು ಬದುಕುವುದಕ್ಕಿಂತ ನಮಗೆ ನಾವೇ ಸಾಟಿ ಅನ್ನುವ ತರಹದಲ್ಲಿ ಬದುಕಿದಾಗ ಜ್ಞಾನದ ಬೆಳಕಿನಲ್ಲಿ ಬದುಕಲಿಕ್ಕೆ ಸಾಧ್ಯವಾಗು ತ್ತದೆ. ಇದರಿಂದಾಗಿ ಸಮಾಜದಲ್ಲಿ ಗೌರವ ಸ್ಥಾನ ಮಾನಗಳನ್ನು ಗಳಿಸಬಹುದು ಎಂದರು.

ಧರ್ಮಸ್ಥಳ ಸ್ವ ಸಹಾಯ ಸಂಘದ ಜಿಲ್ಲಾ ನಿರ್ದೇಶಕ ಜಯಂತ್ ಪೂಜಾರಿ ಮಾತನಾಡಿ, ಶ್ರೀ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವು 1982 ರಂದು ಹುಟ್ಟಿಕೊಂಡು ಪ್ರಗತಿ ಬಂಧು ಯೋಜನೆ ಮೂಲಕ ಹಲವಾರು ಸಮಾಜಮುಖಿ ಕೆಲಸ ಮಾಡುತ್ತಾ ಬಂದಿದ್ದು, ಅದರ ಜೊತೆಗೆ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿ ಜೀವನ ನಡೆಸಲು ಮಹಿಳಾ ಸ್ವ ಸಹಾಯ ಸಂಘವನ್ನು ಮಾಡಿದ್ದು ದಾವಣಗೆರೆ ಜಿಲ್ಲೆಯಲ್ಲಿ 20 ಸಾವಿರ ಮತ್ತು ಹರಿಹರ ನಗರದಲ್ಲಿ 4600 ಸ್ವ ಸಹಾಯ ಸಂಘಗಳನ್ನು ರಚಿಸಿ ಸುಮಾರು 1.98 ಸಾವಿರ ಸದಸ್ಯರು ಮಹಿಳೆಯರ ಪ್ರಗತಿಗೆ ಪೂರಕ ಕೆಲಸ ಮಾಡುತ್ತಾ ಬಂದಿದ್ದಾರೆ ಎಂದರು.

ದಾವಣಗೆರೆಯ ಜ್ಯೋತಿ ಜಂಬಗಿ ಮಾತ ನಾಡಿ ಸರ್ಕಾರವು ಮಹಿಳೆಯರ ಪ್ರಗತಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಕೆ (4ನೇ ಪುಟಕ್ಕೆ)

## ಕಾನೂನುಗಳಿದ್ದರೂ ಮಹಿಳೆಯರ ಹಕ್ಕುಗಳನ್ನು ಕಸಿಯುವ ಹುನ್ನಾರ

### ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ನ್ಯಾಯಾಧೀಶ ಜಿ. ತಿಮ್ಮಯ್ಯ ಕಳವಳ



ಜಗಳೂರು, ಮಾ.8- ಭೂಮಿಯ ಉಗಮ ದಿಂದಲೂ ಧರ್ಮ ಮತ್ತು ಕಾನೂನಿನಡಿ ಮಹಿಳೆ ಸಮಾನ ಎಂಬ ಪುರಾವೆಗಳಿದ್ದರೂ ಸಮಾಜದಲ್ಲಿ ಸತಿ ಸಹಗಮನ, ಶಿಶು ಹತ್ಯೆಗಳಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳಿಂದ ಮಹಿಳೆಯ ಮೇಲೆ ನಿರಂತರ ಶೋಷಣೆ, ಹಕ್ಕುಗಳನ್ನು ಕಸಿಯುವ ಹುನ್ನಾರಗಳು ನಡೆಯುತ್ತಿವೆ ಎಂದು ಜೆಎಂಎಫ್‌ಸಿ ಹಾಗೂ ಸಿವಿಲ್ ನ್ಯಾಯಾಧೀಶ ಜಿ. ತಿಮ್ಮಯ್ಯ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ರಾಜರಾಜೇಶ್ವರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಅಭಿಯೋಜಕ ಇಲಾಖೆ ಹಾಗೂ ದೇವರಾಜ್ ಅರಸು ಪದವಿ ಪೂರ್ವ ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜ್ಞಾವಂತರಾಗಿ ಪ್ರತಿಯೊಬ್ಬರೂ ಸ್ವಯಂ ಪ್ರೇರಣೆ ಮೂಲಕ ಸ್ತ್ರೀಯನ್ನು ಗೌರವಿಸಬೇಕು. ಹೆಣ್ಣು ಹುಟ್ಟಿನಿಂದ ಮಣ್ಣಿನವರೆಗೆ ಪುರುಷನ ಜೊತೆ ಜೀವಿಸುತ್ತಾಳೆ. ಯಾವುದೇ ಅಂಕಗಳಿಗೆ ನಿಲುಕದ ಶ್ರೇಷ್ಠ ಜೀವ ಹೆಣ್ಣಿನ ಸಂಬಂಧವಾಗಿದೆ. ಹೆಣ್ಣಿಗೆ ನಮ್ಮಷ್ಟೇ ಸರಿ ಸಮಾನತೆ ಕಲ್ಪಿಸಬೇಕು. ಕೇವಲ (4ನೇ ಪುಟಕ್ಕೆ)

## ಉತ್ಪಾದನೆಯಲ್ಲಿ ದಾಖಲೆ: ಸಿಎಂ

**(3ನೇ ಪುಟದಿಂದ)** ತೊಡಗಿಸಿಕೊಳ್ಳು ವಂತೆ ಉತ್ತೇಜಿಸಲು ಕೃಷಿ ವಿಶ್ವವಿದ್ಯಾಲಯಗಳಲ್ಲಿ ರೈತರ ಮಕ್ಕಳಿಗೆ ನೀಡುತ್ತಿರುವ ಮೀಸಲಾತಿಯನ್ನು ಶೇ. 50 ಕ್ಕೆ ಹೆಚ್ಚಿಸುವುದಾಗಿ ಪ್ರಕಟಿಸಿದರು.

ಕಳೆದ ಸಾಲಿನಲ್ಲಿ ನಮ್ಮ ಆಹಾರ ಧಾನ್ಯ ಉತ್ಪಾದನೆ 140 ಲಕ್ಷ ಟನ್‌ಗೆ ಹೆಚ್ಚಿತ್ತು, ಇದೂ ಸಹಾ ಐತಿಹಾಸಿಕ ದಾಖಲೆಯೇ, ಆದರೆ ಈ ಬಾರಿ ಈವರೆಗಿನ ಎಲ್ಲಾ ದಾಖಲೆ ಮೀರಿ ಆಹಾರ ಧಾನ್ಯ ಉತ್ಪಾದನೆ ಆಗಿದೆ.

2023ರ ವೇಳೆಗೆ ಕೃಷಿ ಆದಾಯವನ್ನು ದ್ವಿಗುಣಗೊಳಿಸಲು ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ, ಬೆಳೆ ನಿರ್ವಹಣೆ, ಕೊಯ್ಲೋತ್ತರ ನಿರ್ವಹಣೆ, ಸಂಗ್ರಹಣೆ, ಸಂಸ್ಕರಣೆ, ಮಾರಾಟ ಹೀಗೆ ಪ್ರತಿ ಹಂತದಲ್ಲೂ ರೈತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿ ಬೆಂಬಲ ನೀಡಲು ಸರ್ಕಾರ ಬದ್ಧವಾಗಿದೆ ಎಂದವರು ಹೇಳಿದ್ದಾರೆ.

ಜನರಿಗೆ ಆರೋಗ್ಯಕರ ಹಾಗೂ ರಾಸಾಯನಿಕ ಮುಕ್ತ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ದೊರಕಿಸಲು ಹಾಗೂ ಸಾವಯವ ಕೃಷಿ ಉತ್ತೇಜಿಸಲು 500 ಕೋಟಿ ರೂ.ಗಳ ಯೋಜನೆ ರೂಪಿಸಲಾಗಿದೆ.

ರೈತರು ಮಿತವ್ಯಯದಲ್ಲಿ ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ನೆರವಾಗುವಂತೆ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಬಲಪಡಿಸಲಾಗುವುದು.

ಸಣ್ಣ ಟ್ರ್ಯಾಕ್ಟರ್‌ಗಳಿಗೆ ನೀಡುತ್ತಿರುವ ಸಹಾಯಧನವನ್ನು 25-45 ಪಿಟಿಓಎಚ್‌ಪಿ ಟ್ರ್ಯಾಕ್ಟರ್‌ಗಳಿಗೂ ವಿಸ್ತರಿಸುವುದಾಗಿ ಘೋಷಣೆ ಮಾಡಿದರು.

ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಬಿತ್ತನೆ ಬೀಜ ಹಾಗೂ ಹಸಿರೆಲೆ ಗೊಬ್ಬರ ವಿತರಣೆ ಮಾಡಿ ಸಾವಯವ ಇಂಗಾಲ ಹೆಚ್ಚಿಸುವ ಕಾರ್ಯಕ್ರಮವನ್ನು 75 ಕೋಟಿ ರೂ. ವೆಚ್ಚದಲ್ಲಿ ಮುಂದಿನ 5 ವರ್ಷಗಳಲ್ಲಿ ಹಮ್ಮಿಕೊಳ್ಳಲಾಗುವುದು.

ಅತ್ಯುತ್ತಮ ತರಬೇತಿ, ನೂತನ ಆವಿಷ್ಕಾರ ಹಾಗೂ ತಂತ್ರಜ್ಞಾನಗಳನ್ನು ಪರಿಚಯಿಸುವ ಮೂಲಕ ತೋಟಗಾರಿಕೆ ಬೆಳೆಗಾರರ ಆರ್ಥಿಕ ಅಭಿವೃದ್ಧಿಗೆ ನೆರವು ನೀಡಲು ಒತ್ತು ಕೊಡಲಾಗುವುದು.

ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರು ಕಡಿಮೆ ಜಮೀನಿನಲ್ಲಿ ಕೃಷಿ, ತೋಟಗಾರಿಕೆ ಮತ್ತಿತರೆ ಉಪಕಸುಬುಗಳನ್ನು ಕೈಗೊಳ್ಳುವ ಮೂಲಕ ವರ್ಷವಿಡೀ ವರಮಾನ ಪಡೆಯಲು ಸಮಗ್ರ ಕೃಷಿ ಪದ್ಧತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು ಎಂದು ಯಡಿಯೂರಪ್ಪ ಹೇಳಿದರು.

## ಮನೆ ನಿರ್ಮಾಣಕ್ಕೆ 10 ಸಾವಿರ ಕೋಟಿ

**(3ನೇ ಪುಟದಿಂದ)** ನಿರ್ಧರಿಸಲಾಗಿದೆ. ತಾಯಿ ಹಾಲು ಕೊರತೆ ಇರುವ ನವಜಾತ ಶಿಶುಗಳಿಗೆ ಸಕಾಲದಲ್ಲಿ ಸುರಕ್ಷಿತ ಮತ್ತು ಉತ್ತಮ ಗುಣಮಟ್ಟದ ಎದೆ ಹಾಲು ನೀಡಿ ಅಪೌಷ್ಠಿಕತೆ ತಡೆಗಟ್ಟಲು ರಾಜ್ಯದ 4 ವಿಭಾಗಗಳಲ್ಲಿ ತಾಯಂದಿರ ಎದೆಹಾಲಿನ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗುವುದು.

ಪ್ರಸಕ್ತ ಸಾಲಿನಲ್ಲಿ 50 ಹೆಚ್ಚುವರಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಅಭಿವೃದ್ಧಿಪಡಿಸಲು 100 ಕೋಟಿ ರೂ. ನಿಗದಿಪಡಿಸಲಾಗಿದೆ.

ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಹಂತದಲ್ಲಿ ಗುಣಮಟ್ಟದ ಶಿಕ್ಷಣವನ್ನು ಒಂದೇ ಸೂರಿನಡಿ ನೀಡುವ ಉದ್ದೇಶದಿಂದ ಕೇಂದ್ರೀಯ ವಿದ್ಯಾಲಯಗಳ ಮಾದರಿಯಲ್ಲಿ 276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಸ್ಥಾಪಿಸಲಾಗಿದೆ.

ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ತಯಾರಿಸಲಾಗುತ್ತಿದೆ, ಕಳೆದ ಸಾಲಿನಲ್ಲಿ ಆಯ್ದ 50 ಶಾಲೆಗಳಿಗೆ ತಲಾ 2 ಕೋಟಿ ರೂ. ಅನುದಾನ ನೀಡಲಾಗಿದೆ, ಈ ಸಾಲಿನಲ್ಲಿ ಹೆಚ್ಚುವರಿ 50 ಶಾಲೆಗಳ ಅಭಿವೃದ್ಧಿಗೆ 100 ಕೋಟಿ ರೂ. ನಿಗದಿಪಡಿಸಲಾಗಿದೆ.

ರಾಜ್ಯದ ಆಯ್ದ 100 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯದೊಡನೆ ವೃತ್ತಿ ತರಬೇತಿಯನ್ನು ಕೌಶಲ್ಯಾಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ನೀಡಲಾಗುವುದು.

## ಕನಕ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ

ಹೂವಿನಹಡಗಲಿ, ಮಾ.8- ತಾಲ್ಲೂಕು ಕನಕ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ಇದೇ ದಿನಾಂಕ 14 ರಂದು ಚುನಾವಣೆ ನಿಗದಿಪಡಿಸಲಾಗಿದೆ. ಈ ಸಂಬಂಧ ಒಟ್ಟು 15 ಸ್ಥಾನಗಳ ಪೈಕಿ ಸಾಮಾನ್ಯ-9, ಪರಿಶಿಷ್ಟ ಜಾತಿ-1, ಪರಿಶಿಷ್ಟ ಪಂಗಡ-1, ಹಿಂದುಳಿದ ವರ್ಗ ಎ-1, ಹಿಂದುಳಿದ ವರ್ಗ ಬಿ-1 ಹಾಗೂ 2 ಮಹಿಳಾ ಮೀಸಲು ಸ್ಥಾನದಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜಂಗಳಿ ಪ್ರಕಾಶ್ ಅಂಗೂರು, ಮಾದ್ನೂರು ಬೀರಪ್ಪ ತಿಪ್ಪಾಪುರ, ಹಿರಿಯಣ್ಣನವರ ಹನುಮಂತಪ್ಪ ಗುಜುನೂರು, ಎಂ. ಚಿದಾನಂದಪ್ಪ, ಹೂವಿನಹಡಗಲಿ, ಕೆ. ದ್ಯಾಮಪ್ಪ ಹೂವಿನಹಡಗಲಿ, ಆರ್. ಸುಧಾಕರ ಹೂವಿನಹಡಗಲಿ, ಮಾಲತೇಶ ಈಟಿ ಹೂವಿನಹಡಗಲಿ, ಎಂ. ಬಸವರಾಜಪ್ಪ ಹೊನ್ನೂರು, ಜಿ. ಶಿವಕುಮಾರ್ ಅಂಕ್ಲಿ (ಸಾಮಾನ್ಯ), ನೆಲದುರ್ಗ ವಸಂತ್ ಹೂವಿನಹಡಗಲಿ (ಪ.ಜಾತಿ), ಎಂ. ಪರಶುರಾಮಪ್ಪ ಹೂವಿನಹಡಗಲಿ (ಪ. ಪಂಗಡ), ಮಲ್ಲಿನಕೇರಿ ಮೈಲಾರಪ್ಪ ಮುದೇನೂರು, (ಹಿಂದುಳಿದ ವರ್ಗ 'ಎ' ಮೀಸಲು) ಜಿ. ಸರೋಜ ಹೂವಿನಹಡಗಲಿ, ಪಿ. ಸೌಭಾಗ್ಯ ಮಾಗಳ (ಮಹಿಳಾ ಮೀಸಲು) ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಹೊಸ ತೆರಿಗೆ ಹೇರದ ಸಾಲದ ಬಜೆಟ್

**(3ನೇ ಪುಟದಿಂದ)** ರಾಜ್ಯ ತೆರಿಗೆಗಳ ಮೂಲಕ, ಶೇ. 10 ರಷ್ಟನ್ನು ಕೇಂದ್ರ ತೆರಿಗೆ ಪಾಲಿನಿಂದ, ಶೇ. 6 ರಷ್ಟು ಹಣವನ್ನು ಕೇಂದ್ರದ ಸಹಾಯ ಅನುದಾನದಿಂದ, ಶೇ. 3ರಷ್ಟು ರಾಜ್ಯ ತೆರಿಗೆಯೇತರ ರಾಜಸ್ವದಿಂದ ಸಂಗ್ರಹಿಸಲಾಗುವುದು. ಸಾರ್ವಜನಿಕ ಲೆಕ್ಕಗಳ ಮೂಲಕ ಶೇ. 2ರಷ್ಟು ಹಣವನ್ನು ಸಂಗ್ರಹಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಈ ರೀತಿ ಸಂಗ್ರಹವಾಗುವ ಹಣದ ಪೈಕಿ ಶೇ. 31 ರಷ್ಟು ಸರ್ಕಾರಿ ನೌಕರರ ವೇತನ, ಭತ್ಯೆ ಮತ್ತು ಪಿಂಚಣಿಗಳಿಗೆ ಪಾವತಿಯಾಗಲಿದೆ. ಉಳಿದಂತೆ ಸಾಲದ ಮೇಲಿನ ಅಸಲು, ಬಡ್ಡಿಗೆ ಶೇ. 18 ರಷ್ಟು ಹಣ ಒದಗಿಸಲಾಗುತ್ತದೆ, ಬಂಡವಾಳ ವೆಚ್ಚಕ್ಕೆ ಶೇ. 17 ರಷ್ಟು ಹಣ ಒದಗಿಸಲಾಗುವುದು. ವೃದ್ಧಾಪ್ಯ ವೇತನ ಸೇರಿದಂತೆ, ಸಾಮಾಜಿಕ ಭದ್ರತಾ ಪಿಂಚಣಿಗಳಿಗೆ ಬಜೆಟ್ ಆದಾಯದ ಶೇ. 3 ರಷ್ಟು ಹಣ ಒದಗಿಸಲಾಗುತ್ತದೆ.

ರಾಜ್ಯದ ಸ್ವಂತ ತೆರಿಗೆಗಳ ಸಂಗ್ರಹದ ವಿವರ ನೀಡಿದ ಅವರು, ವಾಣಿಜ್ಯ ತೆರಿಗೆಗಳ ಮೂಲಕವೇ ಹೆಚ್ಚು ಆದಾಯ ಬರಲಿದ್ದು, ಒಟ್ಟು 76,473 ಕೋಟಿ ರೂ. ಈ ಬಾಬ್ತಿನಲ್ಲಿ ಲಭ್ಯವಾಗಲಿದೆ, ಅಬಕಾರಿ ಮೂಲದಿಂದ ಈ ಬಾರಿ 24,580 ಕೋಟಿ ರೂ. ನಿರೀಕ್ಷಿಸಲಾಗಿದೆ ಎಂದರು.

ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಬಾಬ್ತಿನಡಿ 12,655 ಕೋಟಿ ರೂ. ಲಭ್ಯವಾಗಲಿದ್ದು, ಮೋಟಾರು ವಾಹನ ತೆರಿಗೆಗಳ ಮೂಲಕ 7,515 ಕೋಟಿ ರೂ. ದೊರೆಯಲಿದೆ ಎಂದು ವಿವರಿಸಿದರು. ಉಳಿದಂತೆ ಇತರೆ ಮೂಲಗಳಿಂದ 2,979 ಕೋಟಿ ರೂ. ರಾಜ್ಯದ ಸ್ವಂತ ತೆರಿಗೆ ಮೂಲದಿಂದ ಲಭ್ಯವಾಗಲಿದೆ. ರಾಜ್ಯದ ಒಟ್ಟಾರೆ ಬಜೆಟ್ ಗಾತ್ರದ ಪೈಕಿ ಹೆಚ್ಚಿನ ಹಣ ಶಿಕ್ಷಣ, ನಗರಾಭಿವೃದ್ಧಿ, ಜಲಸಂಪನ್ಮೂಲ ಕ್ಷೇತ್ರಗಳಿಗೆ ಬಳಕೆಯಾಗಲಿದೆ ಎಂದರು.

ವೇತನ, ಭತ್ಯೆ, ಪಿಂಚಣಿ ಮತ್ತು ಸಾಲ ಮರುಪಾವತಿ ಬಾಬ್ತಿಗೆ ಶೇ.34 ರಷ್ಟು ಹಣ ಒದಗಿಸಲಾಗುತ್ತದೆ. ಉಳಿದಂತೆ ಶಿಕ್ಷಣಕ್ಕೆ ಶೇ. 11, ನಗರಾಭಿವೃದ್ಧಿಗೆ ಶೇ. 10, ಜಲ ಸಂಪನ್ಮೂಲಕ್ಕೆ ಶೇಕಡ 8 ರಷ್ಟು ಹಣ ಬಳಕೆಯಾಗಲಿದೆ.

ಇಂಧನ ಕ್ಷೇತ್ರಕ್ಕೆ ಶೇ. 6, ಗ್ರಾಮೀಣಾಭಿವೃದ್ಧಿಗೆ ಶೇ. 6, ಕಂದಾಯ, ಲೋಕೋಪಯೋಗಿ, ಆರೋಗ್ಯ ಮತ್ತು ಒಳನಾಡು ಸಾರಿಗೆಗೆ ತಲಾ 4ರಷ್ಟು ಹಣ ಒದಗಿಸಲಾಗುವುದು.

ಸಮಾಜ ಕಲ್ಯಾಣ, ಕೃಷಿ, ತೋಟಗಾರಿಕೆಗೆ ತಲಾ ಶೇ. 3 ರಷ್ಟು, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಸತಿ, ಆಹಾರ ಮತ್ತು ನಾಗರಿಕ ಸರಬರಾಜು ಖಾತೆಗೆ ಶೇ. 1 ರಷ್ಟು ಹಣ ಬಳಕೆಯಾಗಲಿದೆ ಎಂದು ವಿವರ ನೀಡಿದರು.

ಬಜೆಟ್ ಸಿದ್ಧಪಡಿಸಲು ಎದುರಾಗಿದ್ದ ಅಡೆ-ತಡೆಗಳ ವಿವರ ನೀಡಿದ ಮುಖ್ಯಮಂತ್ರಿ, ಇಂತಹ ಕಠಿಣ ಪರಿಸ್ಥಿತಿಯಲ್ಲೂ ರಾಜ್ಯದ ಆಯವ್ಯಯ ರೂಪಿಸುವ ಸಂದರ್ಭ ಹಿಂದೆಂದೂ ಬಂದಿರಲಿಲ್ಲ, ಇಷ್ಟಾದರೂ ಸಕಾರಾತ್ಮಕ ಧೋರಣೆಯಿಂದ ಬಜೆಟ್ ಮಂಡಿಸುತ್ತಿರುವುದಾಗಿ ಯಡಿಯೂರಪ್ಪ ತಿಳಿಸಿದರು.

## ಹೃದ್ರೋಗ ಕೇಂದ್ರ ಬೇರೇನೂ ಇಲ್ಲ

**(3ನೇ ಪುಟದಿಂದ)** ದಾವಣಗೆರೆಯಂತೆ ಇತರೆ ಕೆಲ ಜಿಲ್ಲೆಗಳಲ್ಲೂ ಇಂತಹ ವಸತಿ ಗೃಹಗಳು ನಿರ್ಮಾಣವಾಗಲಿವೆ.

ದಾವಣಗೆರೆ ಜಿಲ್ಲೆಗೆ ವೈದ್ಯಕೀಯ ಕಾಲೇಜು ಸಿಗಲಿದೆ ಎಂಬ ಸುದೀರ್ಘ ಕಾಲದ ನಿರೀಕ್ಷೆ ಫಲಕಾರಿಯಾಗಿಲ್ಲ. ಸಿ.ಜಿ. ಆಸ್ಪತ್ರೆ ಉನ್ನತೀಕರಣಕ್ಕೂ ಸ್ಪಂದನೆ ಸಿಕ್ಕಿಲ್ಲ. ಕೃಷಿ ವಿಶ್ವವಿದ್ಯಾನಿಲಯದ ಬೇಡಿಕೆಯೂ ಈಡೇರಿಲ್ಲ.

ವೈದ್ಯಕೀಯ ಕಾಲೇಜು, ಕತ್ತಲಗೆರೆ ಫಾರಂಗೆ ಕೃಷಿ ಕಾಲೇಜು ಹಾಗೂ ಹಾಲು ಉತ್ಪಾದಕರ ಒಕ್ಕೂಟ ವಿಭಜನೆ ಮಾಡಿ ದಾವಣಗೆರೆಗೆ ಪ್ರತ್ಯೇಕ ಒಕ್ಕೂಟ ಮಾಡಿಕೊಡುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಜಿಲ್ಲೆಯ ಬಿಜೆಪಿ ಶಾಸಕರು ಬಜೆಟ್‌ಗೆ ಮುಂಚೆ ಮುಖ್ಯಮಂತ್ರಿ ಬಳಿ ಮನವಿ ಮಾಡಿಕೊಂಡಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ಸಿ.ಜಿ. ಆಸ್ಪತ್ರೆ ಉನ್ನತೀಕರಣದ ಪ್ರಸ್ತಾವವನ್ನು ಮುಖ್ಯಮಂತ್ರಿ ಮುಂದಿರಿಸಿರುವುದಾಗಿ ಹಲವಾರು ಬಾರಿ ಹೇಳಿದ್ದಾರೆ. ಆದರೆ, ಬಜೆಟ್‌ನಲ್ಲಿ ಈ ಬೇಡಿಕೆಗಳಿಗೆ ಸ್ಪಂದನೆ ದೊರೆತಿಲ್ಲ.

## ಕಸಿಯುವ ಹುನ್ನಾರ

**(3ನೇ ಪುಟದಿಂದ)** ಭಾಷಣ, ಪ್ರಚಾರಗಳ ತೋರ್ಪಡಿಕೆಗೆ ಮಾತ್ರ ಸೀಮಿತವಾಗಬಾರದು ಎಂದರು.

ಸರ್ಕಾರಿ ಸಹಾಯಕ ಅಭಿಯೋಜಕಿ ಎಂ. ರೂಪ ಮಾತನಾಡಿ, ಇಂದಿಗೂ ಹೆಣ್ಣು ಭ್ರೂಣ ಹತ್ಯೆ, ವರದಕ್ಷಿಣೆ, ಶೋಷಣೆಗಳು, ದೌರ್ಜನ್ಯಗಳು ಕೊನೆಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸಂವಿಧಾನ ಬದ್ಧ ಸ್ಥಾನಮಾನಗಳಿದ್ದರೂ ದಶಕಗಳ ಹಿಂದೆ ಪುರುಷ ಪ್ರಧಾನ ಕುಟುಂಬಗಳಲ್ಲಿ ತಾತ್ಸಾರ ಮನೋಭಾವನೆಯಿಂದ ಒತ್ತಾಯಪೂರ್ವಕವಾಗಿ ದೇವದಾಸಿಯಂತಹ ಅನಿಷ್ಟ ಪದ್ಧತಿಗೆ ಮಹಿಳೆಯರು ಬಲಿಯಾಗಿರುವುದು ವಿಷಾದನೀಯ ಎಂದರು.

ಸಮಾರಂಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಎಚ್. ಬಸವರಾಜಪ್ಪ, ಕಾರ್ಯದರ್ಶಿ ತಿಪ್ಪೇಸ್ವಾಮಿ, ಪ್ರಾಂಶುಪಾಲ ಬಸವರಾಜ್, ಶ್ರೀನಿವಾಸ್, ವಕೀಲರಾದ ರೂಪ, ನಾಗರತ್ನಮ್ಮ, ರುದ್ರೇಶ್, ಅರುಣಕುಮಾರ್, ಮಹಾಂತೇಶ್ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸಂಜೆ ಕಾಲೇಜುಗಳ ಆರಂಭ

**(3ನೇ ಪುಟದಿಂದ)** ಸಾಧ್ಯವಾಗುತ್ತದೆ ಎಂದರು.

ರಾಜ್ಯದ ಆಯ್ದ ಮಹಾನಗರ ಪಾಲಿಕೆಗಳಲ್ಲಿ ಪ್ರಾಯೋಗಿಕವಾಗಿ ಸಂಜೆ ಕಾಲೇಜುಗಳನ್ನು ಪ್ರಾರಂಭಿಸುವುದಾಗಿ ತಿಳಿಸಿದ ಅವರು, ಪ್ರೌಢ ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಮೂಲಸೌಕರ್ಯ ಕಲ್ಪಿಸಲು 150 ಕೋಟಿ ರೂ. ಅನುದಾನ ನೀಡಲಾಗಿದೆ ಎಂದರು.

ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಗುರು ಚೇತನ, ಓದು ಕರ್ನಾಟಕ ಕಾರ್ಯಕ್ರಮದಡಿ ಶಿಕ್ಷಕರಿಗೆ ತರಬೇತಿ ನೀಡಲು 5 ಕೋಟಿ ರೂ. ಅನುದಾನ ಒದಗಿಸಲಾಗುವುದು. ರಾಜ್ಯದ 8 ಜ್ಞಾನಪೀಠ ಪುರಸ್ಕೃತರು ಅಭ್ಯಾಸ ಮಾಡಿದ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 87 ಪಾಲಿಟೆಕ್ನಿಕ್, 14 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಡಿಜಿಟಲ್ ಕಲಿಕೆಗೆ ಅನುಕೂಲವಾಗುವಂತೆ ಸ್ಮಾರ್ಟ್ ಕ್ಲಾಸ್‌ರೂಮ್‌ಗಳನ್ನು ಮಾಡಲು 50 ಕೋಟಿ ವೆಚ್ಚದಲ್ಲಿ ಕಾರ್ಯಕ್ರಮ ರೂಪಿಸಲಾಗುವುದು ಎಂದು ಹೇಳಿದರು.

## ಒಕ್ಕಲಿಗ ನಿಗಮ ಸ್ಥಾಪನೆ; 500 ಕೋ.ರೂ. ಅನುದಾನ

**(3ನೇ ಪುಟದಿಂದ) ಅಭ್ಯುದಯಕ್ಕೆ ನಮ್ಮ ಸರ್ಕಾರ ಒತ್ತು ನೀಡಿದೆ ಎಂದು ಹೇಳಿದ್ದಾರೆ. ಈ ಸಮುದಾಯಗಳ ವಿದ್ಯಾರ್ಥಿಗಳು ಯುವಜನರ ಶಿಕ್ಷಣ ಹಾಗೂ ಸ್ವಾವಲಂಬನೆಗೆ ಬೆಂಬಲ ನೀಡಲು ಡಾ.ಅಂಬೇಡ್ಕರ್, ವಾಲ್ಮೀಕಿ, ಆದಿ ಜಾಂಬವ. ಭೋವಿ, ಡಿ. ದೇವರಾಜ್ ಅರಸ್, ಜಗಜೀವನ ರಾಂ ಅಭಿವೃದ್ಧಿ ನಿಗಮಗಳು ಅಲ್ಲದೆ, ಮಡಿವಾಳ ಮಾಚಿದೇವ, ಉಪ್ಪಾರ, ಆರ್ಯವೈಶ್ಯ, ವಿಶ್ವಕರ್ಮ, ಕಾಡುಗೊಲ್ಲ, ನಿಜಶರಣ ಅಂಬಿಗರ ಚೌಡಯ್ಯ ಹಾಗೂ ಸವಿತಾ ಸಮಾಜಗಳ ಅಭಿವೃದ್ಧಿ ನಿಗಮಗಳಿಗೆ ಒಟ್ಟಾರೆ 500 ಕೋಟಿ ರೂ. ಅನುದಾನವನ್ನು ಒದಗಿಸಿದ್ದಾರೆ. ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಯಿಂದ 50 ಕೋಟಿ ರೂ. ಮೊತ್ತದ ಕಾರ್ಯಕ್ರಮಗಳನ್ನು ರೂಪಿಸುವುದಾಗಿಯೂ ತಿಳಿಸಿದ್ದಾರೆ.**

## ಮಹಿಳೆಯರು ಅಸೂಯೆ ಬಿಟ್ಟರೆ ಬೆಳವಣಿಗೆ ಸಾಧ್ಯ

**(3ನೇ ಪುಟದಿಂದ)** ಮಾಡಿಕೊಂಡು ಸಮಾಜದಲ್ಲಿ ಆತ್ಮವಿಶ್ವಾಸ ದಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವಕೀಲರಾದ ಶೋಭಾ, ಹರಿಹರದ ಧರ್ಮಸ್ಥಳ ಯೋಜನಾಧಿಕಾರಿ ಗಣಪತಿ ಮಾಲಂಜೆ, ಮಂಜುಳಾ ಮಾತನಾಡಿದರು.

ಈ ಸಂದರ್ಭದಲ್ಲಿ ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ನಗರಸಭೆ ಸದಸ್ಯೆ ನೀತಾ ಮೆಹರ್ವಾಡೆ, ರಂಗಪ್ಪ, ಸಂಗೀತ ಪೂಜಾರ್, ಮಂಜುಳಾ, ನಯನ ಇನ್ನಿತರರಿದ್ದರು.

## ನಗರದಲ್ಲಿಂದು ವಿದ್ಯುತ್ ಇಲ್ಲ

ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೇಂಟ್ ಜಾನ್ ಸ್ಕೂಲ್, ಐ.ಟಿ.ಐ. ಕಾಲೇಜು, ರಿಂಗ್ ರಸ್ತೆ, ಶ್ರೀನಿವಾಸ ನಗರ, ತರಳಬಾಳು ಬಡಾವಣೆ, ಜಯನಗರ 'ಸಿ' ಬ್ಲಾಕ್, ಭಗೀರಥ ಸರ್ಕಲ್, ಚರ್ಚ್, ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಸರಸ್ವತಿ ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಜೀವನ್ ಬಿಮಾನಗರ, ಚಿಕ್ಕಮ್ಮಣ್ಣಿ ದೇವರಾಜ ಅರಸು ಬಡಾವಣೆ, ಜಯನಗರ ಎ, ಬಿ ಬ್ಲಾಕ್, ಎಸ್.ಎಸ್.ಹೈಟೆಕ್ ಆಸ್ಪತ್ರೆ ರಸ್ತೆ, ಸಾಯಿಬಾಬಾ ದೇವಸ್ಥಾನದ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಇರುವುದಿಲ್ಲ.

## ಇಂದು 'ಹಾಡು ಹಕ್ಕಿ' ನಾಟಕ ಪ್ರದರ್ಶನ

ಕರ್ನಾಟಕ ನಾಟಕ ಅಕಾಡೆಮಿ ಸಹಕಾರದೊಂದಿಗೆ ರಂಗ ತರಬೇತಿ ಶಿಬಿರದ ಸಮಾರೋಪದ ಅಂಗವಾಗಿ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಇಂದು ಸಂಜೆ 6.45ಕ್ಕೆ ರಾಷ್ಟ್ರಕವಿ ಜಿ. ಎಸ್.ಶಿವರುದ್ರಪ್ಪನವರ ಜೀವನಾಧರಿತ ಆಯ್ದ ಘಟನೆಗಳ 'ಹಾಡು ಹಕ್ಕಿ' ನಾಟಕ ಪ್ರದರ್ಶನವಿದೆ. ಹೆಚ್ಚಿನ ಮಾಹಿತಿಗಾಗಿ 94816 69521 ಗೆ ಸಂಪರ್ಕಿಸಲು ಕೋರಿದೆ.

## ಬಿ. ಕಲಪನಹಳ್ಳಿ: ಮಹಾಶಿವರಾತ್ರಿ ಸಪ್ತಾಹದಲ್ಲಿ ಇಂದು



ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಮಹಾಶಿವರಾತ್ರಿ ಸಪ್ತಾಹ ಹಾಗೂ ಶರಣ ಬಸವೇಶ್ವರ ರಥೋತ್ಸವವನ್ನು ಮಾರ್ಚ್ 12 ರವರೆಗೆ ಹಮ್ಮಿಕೊಳ್ಳಲಾಗಿದೆ.

ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಇಂದು (ಮಾ.9) ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಎಲ್.ಎಸ್. ಪ್ರಭುದೇವ್ ಧ್ವಜಾರೋಹಣ ಮಾಡುವರು. ಲಿಂ. ಕೆ.ಎಂ. ಸಿದ್ದಲಿಂಗಪ್ಪನವರ ಮಕ್ಕಳು (ಬಿ.ಕಲಪನಹಳ್ಳಿ), ಬಸವನಾಳ್ ಕರಿಬಸಪ್ಪನವರ ಮಗ ಲಿಂ. ಬಸವಂತಪ್ಪ ಮತ್ತು ಮಕ್ಕಳು ಹಾಗೂ ಸಹೋದರರು (ಎಲೆಬೇತೂರು), ಯು.ಕೆ. ಮಹೇಶ್ವರಪ್ಪ ಮತ್ತು ಮಕ್ಕಳು (ಬಿ.ಕಲಪನಹಳ್ಳಿ), ಲಿಂ. ಬಸವರಾಜಯ್ಯನವರ ಮಗ ಬಿ.ಜಿ. ನಾಗರಾಜಯ್ಯ ಮತ್ತು ಮಕ್ಕಳು (ಬಸವನಾಳ್) ಇಂದಿನ ಪೂಜಾ ಸೇವಾರ್ಥಿಗಳಾಗಿದ್ದಾರೆ.

## ಮಹಿಳಾ ಯೋಜನೆಗಳಿಗೆ 37 ಸಾವಿರ ಕೋಟಿ

**(3ನೇ ಪುಟದಿಂದ) ನೀಡಲಾಗುವುದು. ಆಡಳಿತದಲ್ಲಿ ಬಹುಮುಖ್ಯ ಭಾಗವಾಗಿರುವ ಮಹಿಳೆಯರ ಕಲ್ಯಾಣಕ್ಕೆ ಪೂರಕವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಯಡಿಯೂರಪ್ಪ ಹೇಳಿದ್ದಾರೆ. ನಗರ ಪ್ರದೇಶದ ಉದ್ಯೋಗಸ್ಥ ಮಹಿಳೆಯರಿಗೆ ಮಕ್ಕಳ ಆರೈಕೆಗೆ ನೆರವಾಗಲು ಬೆಂಗಳೂರು ಮತ್ತು ಇತರೆ ಮಹಾನಗರಗಳಲ್ಲಿನ ಅಂಗನವಾಡಿಗಳನ್ನು ಶಿಶುಪಾಲನಾ ಕೇಂದ್ರಗಳಾಗಿ ಉನ್ನತೀಕರಿಸಲಾಗುವುದು. ಜಿಲ್ಲಾ ಕೇಂದ್ರಗಳಲ್ಲಿ ಎರಡು ಪ್ರಮುಖ ಸರ್ಕಾರಿ ಕಚೇರಿಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯಲಾಗುವುದು ಎಂದವರು ಹೇಳಿದ್ದಾರೆ.**

**ರಾಜ್ಯಾದ್ಯಂತ 60 ಸಾವಿರ ಮಹಿಳೆಯರಿಗೆ ಉದ್ಯೋಗ, ಶೇ.4 ರಷ್ಟು ಬಡ್ಡಿ ದರದಲ್ಲಿ ಮಹಿಳಾ ಉದ್ಯಮಿಗಳಿಗೆ ಸಾಲ ನೀಡಲಾಗುತ್ತದೆ. ಹಪ್ಪಳ, ಉಪ್ಪಿನಕಾಯಿ ಮತ್ತಿತರೆ ಉತ್ಪನ್ನಗಳ ತಯಾರಕರಿಗೆ ಆನ್‌ಲೈನ್ ಮಾರುಕಟ್ಟೆ ಸೌಲಭ್ಯ, ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಲು 'ಎಲಿವೇಟ್ ಓವನ್' ಎಂಬ ಕಾರ್ಯಕ್ರಮ ಜಾರಿಗೊಳಿಸುವುದಾಗಿ ಹೇಳಿದ್ದಾರೆ. ಈ ಯೋಜನೆಯಡಿ ಹಣಕಾಸು ಸೌಲಭ್ಯ, ಆಪ್ತ ಸಲಹೆಯನ್ನು ನೀಡಲಾಗುತ್ತದೆ. ಮಹಿಳಾ ಉದ್ಯಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ವಾರ್ಷಿಕ ಮೇಳವನ್ನು ಆಯೋಜನೆ ಮಾಡಲಾಗುತ್ತದೆ. ಮಹಿಳೆಯರಿಗೆ 2 ಕೋಟಿ ರೂಪಾಯಿಯವರೆಗೆ ಸಾಲ, ಎಪಿಎಂಸಿಗಳಲ್ಲಿ ಮಹಿಳೆಯರಿಗೆ ಶೇ.10ರಷ್ಟು ರಿಯಾಯಿತಿ ಮೀಸಲಾತಿ ನೀಡಲಾಗುತ್ತದೆ ಎಂದು ಹೇಳಿದ್ದಾರೆ.**

## ಅಸಮಾನತೆ ನಿವಾರಿಸುವ ಸವಾಲಿದೆ

**(3ನೇ ಪುಟದಿಂದ)** ಇಂದು ಎಲ್ಲ ಕ್ಷೇತ್ರಗಳಲ್ಲಿ ಸಂಭ್ರಮಿಸುವಂತಹ ಸಾಧನೆ ಮಾಡಿದ್ದರೂ ಲಿಂಗ ಅಸಮಾನತೆ ಮತ್ತು ಪಕ್ಷಪಾತವನ್ನು ತೊಡೆದು ಹಾಕುವ ಸವಾಲುಗಳನ್ನು ಹೊಂದಿದ್ದು, ಇದನ್ನೂ ಕೂಡ ದಿಟ್ಟವಾಗಿ ಮೆಟ್ಟಿ ನಿಲ್ಲುವ ಶಕ್ತಿ ತೋರಬೇಕಿದೆ ಎಂದವರು ಹೇಳಿದ್ದಾರೆ.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಬೆಳಗಿನಿಂದ ರಾತ್ರಿವರೆಗೆ ಅವಿರತ ಶ್ರಮಿಸುವ ಈ ಹೆಣ್ಣು ಜೀವಗಳ ಕೆಲಸಕ್ಕೆ ಎಷ್ಟು ಸಂಬಳ ಕೊಟ್ಟರೂ ಸಾಲದು. ಸಂವಿಧಾನ ಹೆಣ್ಣುಮಕ್ಕಳಿಗೆ ಅನೇಕ ಅವಕಾಶ ನೀಡಿದೆ. ಈ ಅವಕಾಶಗಳನ್ನು ಬಳಸಿಕೊಂಡು ಮಹಿಳೆಯರು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ಹೇಳಿದರು.

ಎಸ್ಪಿ ಹನುಮಂತರಾಯ, ನಿರುದ್ಯೋಗಿ ಮಹಿಳೆ ಇರುವುದಿಲ್ಲ. ಎಲ್ಲ ಮಹಿಳೆಯರೂ ಕೆಲಸದಲ್ಲಿ ನಿರತರಾಗಿರುತ್ತಾರೆ. ಆದರೆ, ಕೆಲವರಿಗೆ ಮಾತ್ರ ಸಂಬಳ ಬರುತ್ತದೆ. ಶಿಕ್ಷಣ ಮತ್ತು ಮಾಹಿತಿ ಹೆಣ್ಣಿನ ಸಬಲೀಕರಣಕ್ಕೆ ರಹದಾರಿಗಳಾಗಿವೆ ಎಂದರು.

ಮೇಯರ್ ಎಸ್.ಟಿ.ವೀರೇಶ್ ಮಾತನಾಡಿ, ಭಯದಿಂದಲೇ ಶೇ.90 ರಷ್ಟು ಮಹಿಳೆಯರು ತಮ್ಮ ಮೇಲಿನ ದೌರ್ಜನ್ಯ, ಅನ್ಯಾಯವನ್ನು ಹೇಳಿಕೊಳ್ಳುತ್ತಿಲ್ಲ. ಸಂವಿಧಾನ ಎಲ್ಲರಿಗೂ ಸಮಾನ ಅವಕಾಶ ನೀಡಿದ್ದು ಮಹಿಳೆಯರು ದೌರ್ಜನ್ಯ, ಅನ್ಯಾಯವನ್ನು ಸಹಿಸಬಾರದು. ಇದರ ವಿರುದ್ದ ಪ್ರತಿಭಟಿಸಬೇಕು ಎಂದರು.

ಜಿ.ಪಂ. ಸಿಇಒ ಡಾ. ವಿಜಯ ಮಹಾಂತೇಶ್ ದಾನಮ್ಮನವರ, ಜಿ.ಪಂ ಮಾಜಿ ಅಧ್ಯಕ್ಷೆ ಯಶೋಧಮ್ಮ ಮರುಳಪ್ಪ, ತಾ.ಪಂ ಅಧ್ಯಕ್ಷೆ ಮಮತಾ ಮಲ್ಲೇಶಪ್ಪ, ಜಿ.ಪಂ. ಸದಸ್ಯರಾದ ಮಂಜುಳ ಟಿ.ವಿ. ರಾಜು, ಶೈಲಜಾ ಬಸವರಾಜ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ ಮಾತನಾಡಿದರು.

ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಸಾಕಮ್ಮ ಗಂಗಾಧರನಾಯ್ಕ, ಜಿ. ಪಂ. ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಲೋಕೇಶ್ವರ, ಜಿ.ಪಂ. ಸದಸ್ಯರಾದ ಉಮಾ ವೆಂಕಟೇಶ್, ಅರ್ಚನಾ ಬಸವರಾಜ್, ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ಜಿ. ಸಿ.ಮಂಗಳ, ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟದ ಅಧ್ಯಕ್ಷೆ ಶಕುಂತಲ, ಶಾರದಮ್ಮ ಮತ್ತಿತರರು ಉಪಸ್ಥಿತರಿದ್ದರು.

ವಕೀಲೆ ನೇತ್ರಾವತಿ ಹಾಗೂ ಐ.ಕೆ ಮಂಜುಳಾ ಉಪನ್ಯಾಸ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕ ಕೆ.ಹೆಚ್. ವಿಜಯಕುಮಾರ್ ಸ್ವಾಗತಿಸಿದರು.


**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, 30x50 ಪೂರ್ವ, 40x80 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ವಾಜಪೇಯಿ ಲೇಔಟ್‌ನಲ್ಲಿ**
40x60 East, 30x50 East, 30x57 West, 30x40 West, 20x30 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಸೈಜ್ ಕಲ್ಲುಗಳು ಬೇಕಾಗಿವೆ**
ಮನೆ ಕಟ್ಟಲು ಸೈಜ್ ಕಲ್ಲುಗಳು ಬೇಕಾಗಿವೆ.
ಕೂಡಲೇ ಸಂಪರ್ಕಿಸಿ :
ಮೊ.77953-14084

**WANTED**
Boys required for sales executive job at Food Mart Supermarket Davangere.
Qualification: PUC, Any Degree.
Mob ; 98864 63531

**ಮನೆ ಬಾಡಿಗೆ / ಲೀಜಿಗೆ**
ಕೆ.ಬಿ. ಬಡಾವಣೆ 4ನೇ ಕ್ರಾಸ್ ನಲ್ಲಿ, 2ನೇ ಮಹಡಿ, ಉತ್ತರ ದಿಕ್ಕಿನ, ಸಿಂಗಲ್ ಬೆಡ್ ರೂಮ್ ಮನೆ, ಬಾಡಿಗೆ / ಲೀಜಿಗೆ ಇರುತ್ತದೆ. (ಸಸ್ಯಹಾರಿಗಳಿಗೆ ಮಾತ್ರ)
95910 78215

**ಭರಮಸಾಗರದಲ್ಲಿ ಸೈಟ್ ಮಾರಾಟಕ್ಕಿದೆ**
ಭರಮಸಾಗರದ ಪ್ರವಾಸಿ ಮಂದಿರದ ಪಕ್ಕದಲ್ಲಿ ಇರುವ 40 ಅಡಿ ಅಗಲ 125 ಅಡಿ ಉದ್ದವುಳ್ಳ ಸೈಟ್ ಮಾರಾಟಕ್ಕಿದೆ. ಕೊಳ್ಳಲಿಚ್ಛಿಸುವವರು ಸಂಪರ್ಕಿಸಿ :
ಮೊ. : 94486 67170

**ಬೇಕಾಗಿದ್ದಾರೆ**
ಗ್ಲಾಸ್ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಹೊಸಬರಿಗೂ ಆದ್ಯತೆ.
95354 42711

**WANTED**
sales executive office work. accountant billing. managere. final expension service advisor civil engineers. Female or male candidate both interested candidates only. Contact
90196 45223, 99866 92789

**ಸೈಟ್‌ಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ
50x50 East, 50x50 West, 60x40 North, 30x50 North, 40x56 South
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಕೆಲಸಕ್ಕೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
94803 43063

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ PUC ಆದ ಮಹಿಳೆಯರು ಮತ್ತು ಕಂಪ್ಯೂಟರ್ ಅಪರೇಟರ್ ಮಹಿಳೆಯರು,ಸಹಾಯಕ ಮಹಿಳೆಯರು ಬೇಕಾಗಿದ್ದಾರೆ.
ಶಶಿ ದಿನ ಪತ್ರಿಕೆ
ಶಾಂತಿ ಪಾರ್ಕ್ ಪಕ್ಕ, ಅಶೋಕ ರೋಡ್, ಸಂಪರ್ಕಿಸಿ
ಮೊ. 93808 33743

**ಅಪಾರ್ಟ್‌ಮೆಂಟ್ ಮಾರಾಟಕ್ಕಿದೆ**
ದಾವಣಗೆರೆ ಎಸ್.ಎಸ್. ಬಡಾವಣೆ ಅಥಣಿ ಕಾಲೇಜು ಹತ್ತಿರ ಆರ್.ಎಂ.ಶೆಟ್ಟಿ ಎನ್‌ಕ್ಲೇವ್ 2 BHK
98440 61464

**ಸೈಟ್ ಮಾರಾಟಕ್ಕಿದೆ**
ನವೋದಯ ಸ್ಕೂಲ್ ಹಿಂಭಾಗ 30x50 ಉತ್ತರ, ಸಬ್ ರಿಜಿಸ್ಟರ್ ಆಫೀಸ್ ಪಕ್ಕದ ರಸ್ತೆಯಲ್ಲಿ ಇಂಡಸ್ಟ್ರಿಯಲ್ ಸೈಟ್ 30x50 ಪಶ್ಚಿಮ, ಭೂಮಿಕ ನಗರ 30x40 ಪೂರ್ವ ಸೈಟ್ ಮಾರಾಟಕ್ಕಿದೆ.
86181 82332

**ಬೇಕಾಗಿದ್ದಾರೆ**
ನಮ್ಮ ಆಫೀಸ್‌ನಲ್ಲಿ ಕೆಲಸ ಮಾಡಲು PUC ಆದ ಮಹಿಳೆಯರು ಬೇಕಾಗಿದ್ದಾರೆ.
ಶಿವಕುಮಾರ,
ವಸಂತ ರಸ್ತೆ, ದಾವಣಗೆರೆ.
ಸೆಲ್ : 94484 06702

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪಾರ್ಟ್ ಟೈಂ or ಫುಲ್ ಟೈಂ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಮಾತ್ರ.
ವೆಂಕಟೇಶ್ವರ ಫಾರ್ಮಾಸ್ಯೂಟಿಕಲ್ಸ್
ಕೆ.ಟಿ.ಜೆ. ನಗರ, ದಾವಣಗೆರೆ.
86607 75329

**ಮಹಿಳೆ ಬೇಕಾಗಿದ್ದಾರೆ**
ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿರುವ ಮನೆಯಲ್ಲಿ ಅಡುಗೆ ಮಾಡಲು ಲಿಂಗಾಯಿತ ಸಮಾಜದ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 78929 94856

**ಬೇಕಾಗಿದ್ದಾರೆ**
ಪಾನಿಪುರಿ ಅಂಗಡಿಯಲ್ಲಿ ಸಂಜೆ 3 ರಿಂದ ರಾತ್ರಿ 9.30ರವರೆಗೆ ಕೆಲಸ ಮಾಡಲು ಪುರುಷ ಅಥವಾ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ.99166-67888

**WANTED**
Lady Reseptionist for Clinic. Age Between 18 to 25
Contact
63637 86708

**ಬೇಕಾಗಿದ್ದಾರೆ**
ನಮ್ಮ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ITI ಫೇಲ್ ಅಥವಾ ಪಾಸ್ ಆದ ಹುಡುಗರು ಬೇಕಾಗಿದ್ದಾರೆ.
ಜಿ.ಎಸ್.ಗಂಗಾಧರ್
ಮೊ: 98865 52688

**ಮಾರಾಟಕ್ಕಿವೆ**
ಉಪಯೋಗಿಸಿರುವ ಸೆಂಟ್ರಿಂಗ್ ಪ್ಲೈವುಡ್ ಶೀಟ್ ಮತ್ತು ಸಾರ್ವೆ ಪೋಲ್ಸ್ ಮಾರಾಟಕ್ಕಿವೆ. ಸಂಪರ್ಕಿಸಿ
99028 78035

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್. ಲೇ ಔಟ್, 'ಎ' ಬ್ಲಾಕ್, 6ನೇ ಕ್ರಾಸ್‌ನಲ್ಲಿ (# 1815/10) 3 ಬೆಡ್ ರೂಂವುಳ್ಳ ಬೋರ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94482 48062, 70199 76084

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಕನಿಷ್ಠ 6 ತಿಂಗಳು ಮತ್ತು ಹೆಚ್ಚಿನ ಅನುಭವವುಳ್ಳ ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್
ಪಿ.ಜೆ.ಬಡಾವಣೆ, ದಾವಣಗೆರೆ.
ಮೊ.94493 96461

**ಗ್ಲಾಸ್ ಹೌಸ್ ಹತ್ತಿರ ಸೈಟ್ ಮಾರಾಟಕ್ಕಿದೆ**
ಉತ್ತರ ; 30x50
ದಕ್ಷಿಣ 30x40
98444 06587

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹರ್ಷ ಹಾರ್ಡ್ ವೇರ್ ಅಂಡ್ ಪೇಂಟ್ಸ್
ಸುಭಾಷ್ ರೋಡ್, ಅಶೋಕ ಚಿತ್ರಮಂದಿರದ ಎದುರು, ರೈಲ್ವೆ ಗೇಟ್ ಹತ್ತಿರ, ದಾವಣಗೆರೆ - 577 001

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವ/ಇಲ್ಲದ ಯಾರಾದರೂ ಸಂಪರ್ಕಿಸಿ :
ಬುನಿಯಾದ, ಅಶೋಕ ರಸ್ತೆ, ದಾವಣಗೆರೆ.
96200 95520

**ಜಗಳೂರು: ವೈದ್ಯರು ಬೇಕಾಗಿದ್ದಾರೆ**
(Doctor For Clinic)
ಬಾಲಾಜಿ ಮೆಡಿಕಲ್ಸ್
ಭಾರತ್ ಟಾಕೀಸ್ ಎದುರು, ದಾವಣಗೆರೆ ರಸ್ತೆ, ಜಗಳೂರು.
ಮೊ ನಂ : 9900367130

**Computer Faculty WANTED**
Part/Full Time
MS Office, DTP, Tally is a Must.
97424 05888

**ಮನೆ ಮಾರಾಟಕ್ಕಿದೆ**
20x30 ಅಳತೆಯ, ದಕ್ಷಿಣ ದಿಕ್ಕಿಗಿರುವ ಡೋ.ನಂ. 3371/17/b4, 13ನೇ ಮೇನ್, 3ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, ಶಂಕರಲೀಲಾ ಗ್ಯಾಸ್ ಏಜೆನ್ಸೀಸ್ ಹತ್ತಿರ 13 ವರ್ಷದ ಮನೆ ಮಾರಾಟಕ್ಕಿದೆ.
80734 38728

**Raksha Charitable and Educational Trust (R.)**
**REQUIRED**
Pro's Staff for PU College Admission (Gents and ladies) Telecalling, Contact :
8296376716, 9916818369
Location: Davangere, Harihara, Chitradurga, Harapanalli, Channagiri

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಕನಿಷ್ಠ 6 ತಿಂಗಳು ಮತ್ತು ಹೆಚ್ಚಿನ ಅನುಭವವುಳ್ಳ ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ : ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್,ಪಿ.ಜೆ.ಬಡಾವಣೆ, ದಾವಣಗೆರೆ.
ಮೊ.94493 96461

**ಗುಮಾಸ್ತರು ಬೇಕಾಗಿದ್ದಾರೆ**
ದಾವಣಗೆರೆಯ ಅಂಗಡಿ ಕೆಲಸಕ್ಕೆ ಗುಮಾಸ್ತರು ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5ರ ಒಳಗೆ
98444 13231

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೊಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಬಾಡಿಗೆಗೆ ಇದೆ**
2 ಬೆಡ್ ರೂಂವುಳ್ಳ ಬೋರ್‌ವೆಲ್ ಮತ್ತು ಮುನ್ಸಿಪಲ್, ನಲ್ಲಿ ನೀರಿನ ವ್ಯವಸ್ಥೆ ಇರುವ ಮಹಡಿ ಮನೆ, ಬಾಡಿಗೆಗೆ ಇದೆ.
1ನೇ ಮುಖ್ಯ ರಸ್ತೆ, 2ನೇ ತಿರುವು, ವಿನೋಬ ನಗರ,
98441 62168

**TO-LET SHOP**
B.T.GALLI, SRI CHOWDAMBIKA DEVI TEMPLE ROAD NEAR CLOCK TOWER DAVANGERE-577001
CONTACT
97392 65666

**ಬೇಕಾಗಿದ್ದಾರೆ**
ಸ್ಯಾನಿಟರಿ ಹಾಗೂ ಪೈಪುಗಳ ಶೋರೂಂನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ : ಬೆಳಿಗ್ಗೆ 12 ರಿಂದ 2 ರವರೆಗೆ
ಅಂದನೂರು ಸೆರಾಮಿಕ್ಸ್
ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಹತ್ತಿರ ಪಿ.ಬಿ. ರಸ್ತೆ, ದಾವಣಗೆರೆ.

**BUILDING FOR RENT**
on Mama's Joint on 1st Floor prime location is on Rent
Contact :
98440 65638

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**COMMERCIAL BUILDING FOR RENT**
Near Bus Stand & Railway Station
1st floor 1400 sqft
1st floor 1200 sqft
2nd Floor 900 sqft
98440 63379
97411 13055

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬ್ಯಾಡಗಿ ಖಾರದ ಪುಡಿ ದೊರೆಯುತ್ತದೆ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಹಾಗೂ ಶುದ್ಧವಾದ ಬ್ಯಾಡಗಿ ಖಾರದ ಪುಡಿ ಈ ಕೆಳಗಿನ ದರದಲ್ಲಿ ದೊರೆಯುತ್ತದೆ.
110 ರೂ. 1 ಕೆ.ಜಿ., 150 ರೂ. 1 ಕೆ.ಜಿ., 200 ರೂ. 1 ಕೆ.ಜಿ., 250 ರೂ. 1 ಕೆ.ಜಿ., 300 ರೂ. 1 ಕೆ.ಜಿ., 450 ರೂ. 1 ಕೆ.ಜಿ.
ಆನಂದ ಕಾಂಪ್ಲೆಕ್ಸ್, ನಂ. 12, ಅಶೋಕ ರಸ್ತೆ, ದಾವಣಗೆರೆ.
90085 36467

**15 ದಿನಗಳಲ್ಲಿ ಪರಿಹಾರ**
ಬಿಪಿ, ಷುಗರ್, ಥೈರಾಯ್ಡ್, ಗ್ಯಾಸ್ಟ್ರಿಟಿಸ್, ವೆರಿಕೋಸ್, ವೈನ್ಸ್, ತೂಕ ಹೆಚ್ಚು/ಕಡಿಮೆ, ಮೈಗ್ರೇನ್ ಹಲವು ಸಮಸ್ಯೆಗಳಿಗೆ ಪರಿಹಾರ
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013
ಹೋಂ ಡೆಮೋ ಸೌಲಭ್ಯವಿದೆ. T&C Apply

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ (Return Gift) 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
94805 64551, 91418 74551

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
89716 99826

**WANTED**
1. Receptionist Diploma in Computers. 2. Staff Nurses, 3. Aya
4. O.T. Technician
Call : 98440 65638

## ನಾಳೆ ಎಸ್ಸೆಸ್ಸೆಲ್ಸಿ ಪೂರ್ವಭಾವಿ ತಯಾರಿ ಕಾರ್ಯಾಗಾರ

ದಾವಣಗೆರೆ, ಮಾ. 8- ಕಲಾಕುಂಚ ಸಂಸ್ಥೆ ವತಿಯಿಂದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಉಚಿತವಾಗಿ ಪರೀಕ್ಷಾ ಪೂರ್ವಭಾವಿ ತಯಾರಿ ಕಾರ್ಯಾಗಾರವನ್ನು ನಾಡಿದ್ದು 10 ರಂದು ಬೆಳಿಗ್ಗೆ 10-35ಕ್ಕೆ ನಗರದ ಹದಡಿ ರಸ್ತೆಯ ತರಳಬಾಳು ಜಗದ್ಗುರು ಅನುಭವ ಮಂಟಪ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಿ.ಬಿ.ಲೋಕೇಶ್ ತಿಳಿಸಿದ್ದಾರೆ.

ಸಮಾರಂಭದ ಉದ್ಘಾಟನೆಯನ್ನು ಜಿಲ್ಲಾ ಡಿಡಿಪಿಐ ಸಿ.ಆರ್.ಪರಮೇಶ್ವರಪ್ಪ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಸಿರಿಗೆರೆಯ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ|| ಎಸ್.ಬಿ.ರಂಗನಾಥ್ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಯಟ್ ಉಪನಿರ್ದೇಶಕ ಹೆಚ್.ಕೆ.ಲಿಂಗರಾಜ್, ದಾವಣಗೆರೆ ಕನ್ನಡ ಪರಿಚಾರಕ ಬಿ.ವಾಮದೇವಪ್ಪ ಆಗಮಿಸಲಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ. ಶ್ರೀ ತರಳಬಾಳು ಜಗದ್ಗುರು ಪ.ಪೂ. ಕಾಲೇಜಿನ ವಿಶ್ರಾಂತ ಪ್ರಾಚಾರ್ಯ ಎಂ.ಕೆ.ಪ್ರೇಮಕುಮಾರಿ, ಸಂಸ್ಥೆಯ ಮುಖ್ಯೋಪಾಧ್ಯಾಯ ಎ.ವೆಂಕಟೇಶ್, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷ ಕೆ.ಹೆಚ್.ಮಂಜುನಾಥ್ ಉಪಸ್ಥಿತರಿರುತ್ತಾರೆ.

## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕಿನ ದಾವಣಗೆರೆ ನಗರದ ಎಲ್ಲಾ ಪ್ರದೇಶಗಳಲ್ಲಿ ಹಾಗೂ ಬೇಳವನೂರು, ಶಿರಮಗೊಂಡನಹಳ್ಳಿ, ಶಾಮನೂರು, ಕುಂದವಾಡ, ಬಾತಿ, ಅಮೃತನಗರ, ನೀಲಾನಹಳ್ಳಿ, ಬೂದಿಹಾಳ್, ಕಕ್ಕರಗೊಳ್ಳ ಹಾಗೂ ಸುತ್ತಮುತ್ತಲಿನ ಎಲ್ಲಾ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಮಹಿಳೆ ಮಾನಸಿಕವಾಗಿ ಸಬಲೆ : ನ್ಯಾ.ಕೆ.ಬಿ. ಗೀತಾ




ದಾವಣಗೆರೆ, ಮಾ.8 - ಮಹಿಳೆ ದೈಹಿಕವಾಗಿ ಅಬಲೆಯಾಗಿದ್ದರೂ, ಮಾನಸಿಕವಾಗಿ ಸಬಲೆಯಾಗಿದ್ದಾಳೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಬಿ.ಗೀತಾ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಏರ್ಪಡಿಸಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯ ಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಹಾಗೂ ಕಾನೂನು ಮಹಿಳೆಯರಿಗಾಗಿ ಅನೇಕ ಸವಲತ್ತು ನೀಡಿವೆ. ಕಾರಣ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಪುರುಷರಿಗಿಂತ ಕಡಿಮೆ ಇಲ್ಲ ಎಂದು ಸಾಬೀತುಪಡಿಸಿದ್ದಾಳೆ. ಮಾನಸಿಕವಾಗಿ ಹಾಗೂ ದೈಹಿಕವಾಗಿ ಪುರುಷನೊಂದಿಗೆ ಪೈಪೋಟಿ ನಡೆಸುತ್ತಿದ್ದಾಳೆ. ಇಡೀ ಕುಟುಂಬದ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದಾಳೆ ಎಂದರು.

ಮಹಿಳಾ ದಿನಾಚರಣೆಯ ಹಿನ್ನೆಲೆಯನ್ನು ವಿವರಿಸಿದ ನ್ಯಾಯಾಧೀಶರು, ಅಂದಿನ ದಿನಗಳಲ್ಲಿ ಮಹಿಳೆಯರಿಂದ ಪುರುಷರಿಗಿಂತ ಹೆಚ್ಚಾಗಿ ದುಡಿಸಿಕೊಂಡು ಕಡಿಮೆ ವೇತನ ನೀಡಿ, ಕೀಳಾಗಿ ಕಾಣಲಾಗುತ್ತಿತ್ತು. ಶೋಷಣೆ ಮಾಡುತ್ತಿದ್ದರು. ಇದರಿಂದ ಬೇಸತ್ತ ಮಹಿಳೆಯರು ಪ್ರಪಂಚದಲ್ಲಿ ಮಹಿಳೆಯರ ಅಸ್ತಿತ್ವ ಉಳಿಯಬೇಕಾದರೆ ಸಂಘಟಿತರಾಗ ಬೇಕು. ಸ್ತ್ರೀ ಅಬಲೆ ಅಲ್ಲ ಸಬಲೆ. ಹೆಣ್ಣಿನ ಅಸ್ತಿತ್ವವನ್ನು ಮಹಿಳೆಯರೇ ಉಳಿಸಬೇಕು ಎಂದು ಮಹಿಳೆಯರ ಮತದಾನಕ್ಕೆ, ಸಮಾನ ಕೆಲಸಕ್ಕೆ, ಸಮಾನ ವೇತನಕ್ಕಾಗಿ ರಾಷ್ಟ್ರ ದಾದ್ಯಂತ ಪ್ರತಿಭಟನೆ ನಡೆಸಿದ್ದಾಗಿ ಹೇಳಿದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯನ್ಯಾಯಿಕ ದಂಡಾಧಿಕಾರಿಗಳಾದ ಪ್ರೀತಿ ಎಸ್. ಜೋಶಿ ಮಾತನಾಡಿ, ಮಹಿಳೆಯರು ಕಾನೂನುಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಉದ್ಯೋಗಸ್ಥ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಅನೇಕ ಕಾಯ್ದೆ ಕಾನೂನುಗಳು ಜಾರಿಯಾಗಿದ್ದು ಮಹಿಳೆಯರು ಅದನ್ನು ದುರುಪಯೋಗ ಪಡಿಸಿಕೊಳ್ಳಬಾರದು ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ.ತೂ.ಕ.ಶಂಕರಯ್ಯ ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಮುನ್ನುಗ್ಗುತ್ತಿದ್ದು, ಆಕೆಯನ್ನು ಕೇವಲ ಗೌರವಿಸುವುದಲ್ಲದೇ ಸರಿಸಮಾನವಾಗಿ ಕಾಣುವ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದರು.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಹೆಚ್. ಅರುಣ್ ಕುಮಾರ್, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಗಳಾದ ಪ್ರವೀಣ್ ನಾಯಕ್, ನ್ಯಾಯಾಧೀಶರಾದ ರಶ್ಮಿ ಎಂ.ಮರಡಿ, ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಂದಿನಿ, ಕಾಲೇಜಿನ ಐ.ಕ್ಯೂ.ಎಸ್.ಸಿ. ಸಂಚಾಲಕ ಪ್ರೊ.ಟಿ. ವೀರೇಶ್, ಇಂಗ್ಲೀಷ್ ವಿಭಾಗದ ಮುಖ್ಯಸ್ಥೆ ಎಂ.ಎಲ್.ತ್ರಿವೇಣಿ, ಪ್ರೊ.ಭೀಮಣ್ಣ ಸುಣಗಾರ್, ಡಾ.ಮಹೇಶ್.ಎನ್.ಪಾಟೀಲ್, ಡಾ.ದಾದಾಪೀರ್ ನವಿಲೇಹಾಳ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಗಿರಿಯಮ್ಮ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ

ಹರಿಹರ, ಮಾ.8- ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ಮಹಿಳಾ ಕೋಶ ಹಾಗೂ ರೆಡ್‌ಕ್ರಾಸ್ ಸಂಯುಕ್ತಾಶ್ರಯದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜು ಪೌರ ಸೇವಾ ಸಮಿತಿ ಅಧ್ಯಕ್ಷ ತಿಪ್ಪೇಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಡಾ. ಆರತಿ ಸುಂದರೇಶ್ ಅವರು, ಹೆಣ್ಣು ಮಕ್ಕಳ ಹದಿಹರೆಯದ ಸಮಸ್ಯೆಗಳ ಕುರಿತು ಮಾತನಾಡಿದರು. ಕಾಲೇಜು ಪ್ರಾಂಶುಪಾಲ ಡಾ. ಜಿ.ಬಿ. ಗಂಗಾಧರಪ್ಪ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಕೋಶದ ಸಂಚಾಲಕಿ ರೋಹಿಣಿ ಎಂ. ಶಿರಹಟ್ಟಿ ಹಾಗೂ ರೆಡ್‌ಕ್ರಾಸ್ ಸಂಚಾಲಕ ಡಾ. ವಿ.ಬಿ. ಜೋಷಿ ಉಪಸ್ಥಿತರಿದ್ದರು.

## ನಾಳೆ ಅಂಗವಿಕಲರಿಗೆ ಕಿಟ್ ವಿತರಣೆ

ದಾವಣಗೆರೆ, ಮಾ. 8- ಅಂಗವಿಕಲರಿಗೆ ವೈದ್ಯಕೀಯ ಉಪಕರಣಗಳು ಹಾಗೂ ಸಲಕರಣೆಗಳನ್ನು ವಿತರಿಸುವ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 10 ರಂದು ಬೆಳಿಗ್ಗೆ 10.30 ಕ್ಕೆ ಹಮ್ಮಿಕೊಳ್ಳಲಾಗಿದೆ. ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ, ಜಿಲ್ಲಾ ಅಂಗವಿಕಲರ ಅಭಿವೃದ್ಧಿ ಕಾರ್ಯಕ್ರಮ 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎಸ್.ಬಿ.ಎಂ ಬ್ಯಾಂಕ್ ಹತ್ತಿರ, ನಿಟ್ಟುವಳ್ಳಿ ಹೊಸ ಬಡಾವಣೆ ದಾವಣಗೆರೆ ಇಲ್ಲಿ ವಿತರಿಸಲಾಗುವುದು.

# ರಾಜ್ಯ ಬಜೆಟ್ ಬಗ್ಗೆ ಅಭಿಪ್ರಾಯಗಳು...

## ರಾಜ್ಯ ಬಜೆಟ್ ಸ್ವಾಗತಾರ್ಹ

ದಾವಣಗೆರೆಗೆ 50 ಹಾಸಿಗೆ ಸಾಮರ್ಥ್ಯದ ಜಯದೇವ ಹೃದ್ರೋಗ ಆಸ್ಪತ್ರೆಯ ಉಪ ಕೇಂದ್ರವನ್ನು ಸ್ಥಾಪಿಸಲು ರೂ 20.00 ಕೋಟಿ ಅನುದಾನ ನೀಡಿರುವ ಮಾನ್ಯ ಮುಖ್ಯಮಂತ್ರಿ ಕಾರ್ಯ ಮೆಚ್ಚುವಂತದ್ದಾಗಿದೆ.

ವಿಶೇಷವಾಗಿ ಅಂತರರಾಷ್ಟ್ರೀಯ ಮಹಿಳಾ ದಿನವಾದ ಇಂದು ಬಜೆಟ್‌ನಲ್ಲಿ ಮಹಿಳಾ ಅಭಿವೃದ್ಧಿಗೆ ಒಟ್ಟಾರೆ 37 ಸಾವಿರ ಕೋಟಿ ರೂ ಮೀಸಲಿರಿಸಿದ್ದಾರೆ. ಇದರಲ್ಲಿ ಕಡಿಮೆ ಬಡ್ಡಿ ದರದಲ್ಲಿ ಮಹಿಳಾ ಉದ್ಯಮಿಗಳಿಗೆ 2 ಕೋಟಿ ರೂ.ವರೆಗೆ ಸಾಲ ನೀಡುವ ಯೋಜನೆಯು ರಾಜ್ಯದ ಮಹಿಳೆಯರ ಸಬಲೀಕರಣಕ್ಕೆ ಸಹಕಾರಿ ಆಗಲಿದೆ, ವಿವಿಧ ಹಿಂದುಳಿದ ವರ್ಗಗಳ ಸಮಾಜದ ಅಭಿವೃದ್ಧಿಗೆ ವಿಶೇಷ ಅನುದಾನ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯದ ಬೆಳವಣಿಗೆಗೆ ಆದ್ಯತೆ, ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ, ರಾಜ್ಯದ ರೈತರ ಸಬಲೀಕರಣಕ್ಕೆ ಯೋಜನೆಗಳು, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ, ಸೇರಿದಂತೆ ಅನೇಕ ಜನಪರ ಕಾಳಜಿಯನ್ನು ರಾಜ್ಯ ಬಜೆಟ್‌ನಲ್ಲಿ ತೋರಿಸಿದ್ದು ಸ್ವಾಗತಾರ್ಹ.



ಅಭಿವೃದ್ಧಿಶೀಲ ಹಾಗೂ ಭವಿಷ್ಯದ ಕಡೆಗೆ ಹೆಜ್ಜೆ ಹಾಕುವ ಸ್ವಾಗತಾರ್ಹ ಬಜೆಟ್ ಇದಾಗಿದೆ.

**- ಪ್ರಸನ್ನ ಕುಮಾರ್ ಕೆ**

## ಬಜೆಟ್ ಸ್ವಲ್ಪ ಸಿಹಿ, ಸ್ವಲ್ಪ ಕಹಿ

ದಾವಣಗೆರೆಗೆ ಒಂದು ಜಯದೇವ ಹೃದ್ರೋಗ ಉಪಕೇಂದ್ರ, ಸ್ವಾಗತಾರ್ಹ ನಿರ್ಧಾರ (20 ಕೋಟಿ ರೂಪಾಯಿ). ಕರ್ನಾಟಕದಾದ್ಯಂತ ಜೈನ ಯಾತ್ರಾ ಕೇಂದ್ರದ ಅಭಿವೃದ್ಧಿಗೆ ಮೀಸಲಿಟ್ಟ ಹಣವೂ ಸ್ವಾಗತಾರ್ಹ ನಿರ್ಧಾರ.

ದಾವಣಗೆರೆ - ಚಿತ್ರದುರ್ಗ - ತುಮಕೂರು ನೇರ ರೈಲು ಮಾರ್ಗದ ಭೂ ಖರೀದಿ ಕಾರ್ಯವನ್ನು ಈ ಬಜೆಟ್‌ನಲ್ಲಿ ಚುರುಕುಗೊಳಿಸಬಹುದಾಗಿತ್ತು.

ಹಳೆಯ ದಾವಣಗೆರೆ ಪ್ರದೇಶದಲ್ಲಿ ಕರ್ನಾಟಕ ಒನ್ ಶಾಖೆಗಳನ್ನು ನಾಗರಿಕರ ಅನುಕೂಲಕ್ಕೆ ತೆರೆಯಬಹುದಿತ್ತು. ಸ್ಮಾರ್ಟ್ ಸಿಟಿ ಅಡಿ ಬೆಂಗಳೂರು ಮಾದರಿ, Tender Sure Footpaths (ಜನ ನಿಬಿಡ ಪ್ರದೇಶದಲ್ಲಿ) ದಾವಣಗೆರೆಗೆ ಕಲ್ಪಿಸಬಹುದಾಗಿತ್ತು, ವೇಗವಾಗಿ ಬೆಳೆಯುತ್ತಿರುವ ದಾವಣಗೆರೆ ನಗರಕ್ಕೆ ಒಂದು ಸುಸಜ್ಜಿತ ಕ್ರೀಡಾಂಗಣಕ್ಕೆ ಅನುದಾನವನ್ನು ಬಿಡುಗಡೆಗಳಿಸಬಹುದಾಗಿತ್ತು ಮಧ್ಯ ಕರ್ನಾಟಕದ ಬಹುದಿನದ ಬೇಡಿಕೆಯಲ್ಲಿ ಒಂದಾದ ದಾವಣಗೆರೆ ಹಾಗು ಚಿತ್ರದುರ್ಗ ನಗರಗಳ ಮಧ್ಯೆ ವಿಮಾನ ನಿಲ್ದಾಣಕ್ಕೆ ಆದ್ಯತೆ ಕೊಡಬೇಕಾಗಿತ್ತು.



**- ರೋಹಿತ್ ಎಸ್ . ಜೈನ್,** ಕಾರ್ಯದರ್ಶಿ, ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಸಂಘ, ದಾವಣಗೆರೆ

## ಹೃದ್ರೋಗ ಆಸ್ಪತ್ರೆ : ಮಧ್ಯ ಕರ್ನಾಟಕಕ್ಕೆ ನೀಡಿದ ಕೊಡುಗೆ

ಜಯದೇವ ಹೃದ್ರೋಗ ಆಸ್ಪತ್ರೆ ಮಂಜೂರು ಮಾಡಿ ಇಂದಿನ ಬಜೆಟ್ ನಲ್ಲಿ 20 ಕೋಟಿ ಹಣ ಮೀಸಲಿಟ್ಟಿರುವುದು ದಾವಣಗೆರೆ ಜಿಲ್ಲೆಯ ಹಾಗೂ ಮಧ್ಯ ಕರ್ನಾಟಕದ ಜನತೆಗೆ ನೀಡಿರುವ ಕೊಡುಗೆಯಾಗಿದೆ.

ಈ ಕೊಡುಗೆಯಿಂದಾಗಿ ಮಧ್ಯ ಕರ್ನಾಟಕದ ಬಡ ಹಾಗೂ ಮಧ್ಯಮ ವರ್ಗದ ಜನತೆಗೆ ಬಹಳಷ್ಟು ಅನುಕೂಲವಾಗಿದೆ. ಹೃದಯ ರೋಗ ಸಮಸ್ಯೆ ಬಂದ ತಕ್ಷಣ ಎಲ್ಲಾ ವರ್ಗದ ಜನರು ಬೆಂಗಳೂರಿನ ಜಯದೇವ ಆಸ್ಪತ್ರೆ ಕಡೆ ನೋಡುವುದು ಸರ್ವೇ ಸಾಮಾನ್ಯ, ಆದರೆ ಹೃದಯ ರೋಗಿಗಳಿಗೆ ಬಹಳಷ್ಟು ಬಾರಿ ತಕ್ಷಣದ ಚಿಕಿತ್ಸೆ ಅವಶ್ಯವಾಗಿರುತ್ತದೆ, ಬೆಂಗಳೂರಿಗೆ ಹೋಗುವುದರ ಒಳಗಾಗಿಯೇ ಹಲವಾರು ಜನರು ಜೀವ ಕಳೆದು ಕೊಂಡಿರುವುದನ್ನು ಬಹಳಷ್ಟು ಬಾರಿ ಕೇಳಿದ್ದೇವೆ, ಇಂತಹ ಸಂದರ್ಭದಲ್ಲಿ ಸಿ.ಎಂ ಬಿ.ಎಸ್.ವೈ ರವರ ಕೊಡುಗೆ ಮಧ್ಯ ಕರ್ನಾಟಕದ ಜನತೆಯ ಭಾಗ್ಯವೇ ಸರಿ.



**- ಎನ್.ರಾಜಶೇಖರ್**
ಜಿಲ್ಲಾ ಮಾಜಿ ಪ್ರಧಾನ ಕಾರ್ಯದರ್ಶಿ, ದಾವಣಗೆರೆ

## 'ರೈತರ ಪರವಾದ ಬಜೆಟ್'



ಬಜೆಟ್‌ನಲ್ಲಿ ಕೃಷಿ ವಲಯಕ್ಕೆ ಉತ್ತೇಜನ ನೀಡಿರುವುದು ಸ್ವಾಗ ತಾರ್ಹ. ಕೃಷಿ ವಲಯಕ್ಕೆ ಹೆಚ್ಚು ಪ್ರಾಧಾನ್ಯತೆ ಜೊತೆಗೆ ಉತ್ತೇಜನ ನೀಡಿದ್ದು, ಕೃಷಿ ಕಾರ್ಮಿಕರು ಕೃಷಿಕರು ಹೈನು ಗಾರಿಕೆ, ಮೀನುಗಾರರಿಗೆ ರೇಷ್ಮೆ ಬೆಳೆಗಾರರಲ್ಲಿ, ಹೂ ಬೆಳೆಗಾರರಲ್ಲಿ ಹರ್ಷ ತಂದಿದೆ. ಇದೊಂದು ಕೃಷಿ ಪರ ಬಜೆಟ್.

**- ಎಸ್.ಮರಳಸಿದ್ದೇಶ್ವರ,** ಶಿವಪುರ, ಹೊಳಲ್ಕೆರೆ.

## ಬಜೆಟ್ : ದಾವಣಗೆರೆಗೆ ಆದ್ಯತೆ ಇಲ್ಲ

ದಾವಣಗೆರೆಯಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ಸ್ಥಾಪನೆ ಹಾಗೂ ಐವತ್ತು ಪರಿಶಿಷ್ಟ ಜಾತಿ ಹಾಸ್ಟೆಲ್‌ಗಳ ಸ್ಥಾಪನೆಗೆ ಒತ್ತು ನೀಡಿರುವುದು ಸ್ವಾಗ ತಾರ್ಹ. ಆದರೆ, ಮಧ್ಯ ಕರ್ನಾಟಕ ದಾವಣಗೆರೆಗೆ ಹೆಚ್ಚಿನ ಆದ್ಯತೆ ಇಲ್ಲದಿ ರುವುದು ಶೋಚನೀಯ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಹೆಚ್ಚುವರಿ ತೆರಿಗೆ ಕಡಿಮೆ ಮಾಡದಿರುವುದು ನಿರೀಕ್ಷೆಯನ್ನು ಹುಸಿ ಮಾಡಿ ಗ್ರಾಹಕರ ಜೇಬಿಗೆ ಕತ್ತರಿ ಹಾಕಿದೆ



**- ವೆಂಕಟೇಶ್ ಬಾಬು ಎಸ್ .,** ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದಾವಣಗೆರೆ.

## ಜನವಿರೋಧಿ, ನಿರಾಶಾದಾಯಕ ಬಜೆಟ್

ರಾಜ್ಯ ಬಜೆಟ್ ಜನವಿರೋಧಿ ಹಾಗೂ ನಿರಾಶಾದಾಯಕ ಬಜೆಟ್ ಆಗಿದೆ ಎಂದು ಕೆಪಿಸಿಸಿ ರಾಜ್ಯ ವಕ್ತಾರ ಡಿ. ಬಸವರಾಜ್ ಟೀಕಿಸಿದ್ದಾರೆ. ಗಗನಕ್ಕೆ ಏರಿರುವ ಪೆಟ್ರೋಲ್, ಡೀಸೆಲ್ ಹಾಗೂ ಸಿಲಿಂಡರ್ ಮೇಲಿನ ರಾಜ್ಯ ಮಾರಾಟ ತೆರಿಗೆಯನ್ನು ಬಜೆಟ್‌ನಲ್ಲಿ ಇಳಿಸುತ್ತಾರೆಂದು ನಂಬಿದ್ದ ಜನರಿಗೆ ತೀವ್ರ ನಿರಾಶೆಯಾಗಿದೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿ ಜನರ ಬದುಕು ದುಸ್ತರವಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯದ ಜನರ ನೆರವಿಗೆ ಸರ್ಕಾರ ಬಾರದೇ ಇರುವುದು ಜನರಿಗೆ ಬಗೆದ ದ್ರೋಹವಾಗಿದೆ.

ರಾಜ್ಯದ ಜನಸಂಖ್ಯೆಯಲ್ಲಿ ಶೇ. 25ರಷ್ಟಿರುವ ದಲಿತರು ಮತ್ತು ಶೇ. 12ರಷ್ಟಿರುವ ಅಲ್ಪಸಂಖ್ಯಾತರಿಗೆ ಸೂಕ್ತ ಅನುದಾನ ನೀಡಿಲ್ಲವೆಂದು ಬಿಎಸ್‌ವೈ ನಡೆಯನ್ನು ಖಂಡಿಸಿದ್ದಾರೆ.



ಒಟ್ಟಾರೆಯಾಗಿ 2021-22ರ ಬಜೆಟ್ ರಾಜ್ಯದ ಅಭಿವೃದ್ಧಿ ಪೂರಕವಾಗಿಲ್ಲ. ಈ ಬಾರಿಯ ಬಜೆಟ್ ಖಾಲಿ ಡಬ್ಬ, ಸೌಂಡ್ ಜಾಸ್ತಿ ಯಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

**- ಡಿ.ಬಸವರಾಜ್,** ಕೆಪಿಸಿಸಿ ವಕ್ತಾರ

## ರೈತವಿರೋಧಿ ಬಜೆಟ್

ರಾಜ್ಯ ಸರ್ಕಾರ ಈ ಬಾರಿ ಬಜೆಟ್ ಜನ ವಿರೋಧಿ ಹಾಗೂ ರೈತ ವಿರೋಧಿಯಾಗಿದೆ. ರೈತರ ಸಂಕೇತ ಹಸಿರು ಶಾಲು ಹಾಕಿಕೊಂಡು ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಬಜೆಟ್‌ಲ್ಲಿ ರೈತರಿಗೆ ಅನುಕೂಲವಾಗುವಂತಹ ಯೋಜನೆ ಜಾರಿಗೆ ತರುವಲ್ಲಿ ವಿಫಲರಾಗಿದ್ದಾರೆ.

ಈ ಬಾರಿ ಪ್ರತ್ಯೇಕ ರೈತ ಬಜೆಟ್ ಕೂಡ ಮಂಡನೆ ಮಾಡದೇ ಅನ್ಯಾಯ ಮಾಡಿದ್ದಾರೆ. ಸಂಕಷ್ಟದಲ್ಲಿರುವ ಅಡಿಕೆ ಬೆಳೆಗಾರರು ಹಾಗೂ ಮೆಕ್ಕೆಜೋಳ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕಿತ್ತು. ಇನ್ನೂ ತರಕಾರಿ ಸೇರಿದಂತೆ, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು ಕಡಿಮೆ ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಇಳಿಕೆ ಮಾಡುವಲ್ಲಿಯೂ ಈ ಸರ್ಕಾರ ವಿಫಲವಾಗಿದೆ.

ದಾವಣಗೆರೆ ಜಿಲ್ಲೆಗೆ ಕೃಷಿ ಹಾಗೂ ಪಶು ವೈದ್ಯಕೀಯ ಕಾಲೇಜ್ ಆರಂಭ ಮಾಡಲು ಬಜೆಟ್‌ನಲ್ಲಿ ಘೋಷಣೆ ಮಾಡುತ್ತಾರೆ ಎಂಬ ನಿರೀಕ್ಷೆ ಹುಸಿಯಾಗಿದೆ.



**- ಬಸವರಾಜು ವಿ ಶಿವಗಂಗಾ,**
ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ.

## 6ಕ್ಕೆ ಏರಲಿಲ್ಲ 3ಕ್ಕೆ ಇಳಿಯಲಿಲ್ಲ

ರಾಜ್ಯ ಬಜೆಟ್‌ನಲ್ಲಿ ಮಹಿಳಾ ಉದ್ಯಮಕ್ಕೆ ಹೆಚ್ಚಿನ ರೀತಿಯಲ್ಲಿ ಸೌಲಭ್ಯ ಕೊಟ್ಟಿದ್ದಾರೆ. ಸರ್ಕಾರಿ ಮೆಡಿಕಲ್ ಕಾಲೇಜು ತೆರೆಯಲು ಹೋದ ವರ್ಷದ ಬಡ್ಜೆಟ್‌ನಲ್ಲಿ ಹೇಳಿದ್ದರು ಮತ್ತು ಈ ವರ್ಷದ ಬಜೆಟ್‌ನಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು.

ವ್ಯಾಟ್ ನಲ್ಲಿ 2014-15 ರಿಂದ 2017 ಜೂನ್ ತಿಂಗಳವರೆಗಿನ ಲೆಕ್ಕ ಪರಿಶೋಧನೆಯಲ್ಲಿ ಹಾಕುವ ದಂಡ ಮತ್ತು ಬಡ್ಡಿಯನ್ನು ಕರ ಸಮಾಧಾನದ ಅಡಿಯಲ್ಲಿ ಜಾರಿಗೆ ತಂದಿದ್ದು ಸುಮಾರು ರೂ.76500.00 ಕೋಟಿ ತೆರಿಗೆ ಹಣ ಸರ್ಕಾರಕ್ಕೆ ಸಂದಾಯವಾಗಿರುತ್ತದೆ. ಇದು ನಿಜಕ್ಕೂ ಒಳ್ಳೆಯ ಬೆಳವಣಿಗೆ. ವ್ಯಾಪಾರಸ್ಥರಿಗೆ ಅನುಕೂಲಕರವಾಗಿದೆ.

ಒಟ್ಟಿಗೆ '6ಕ್ಕೆ ಏರಲಿಲ್ಲ 3ಕ್ಕೆ ಇಳಿಯಲಿಲ್ಲ' ಅನ್ನೋತರ ಈ ವರ್ಷದ ಬಜೆಟ್ ಮಂಡನೆಯಾಗಿದೆ



**- ಜಂಬಿಗಿ ರಾಧೇಶ್,**
ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷರು, ದಾವಣಗೆರೆ.

## ಬಜೆಟ್‌ಗೆ ದೂರ ದೃಷ್ಟಿಯಿಲ್ಲ

ಅನುದಾನವನ್ನು ಎಲ್ಲಾ ಇಲಾಖೆಗೆ ಸಮರ್ಪಕವಾಗಿ ಹಂಚಿಕೆ ಮಾಡಿಲ್ಲ. ಬಡವರಿಗೆ ಹೊಸ ಯೋಜನೆ ಕೊಟ್ಟಿಲ್ಲ. ಯಾರಿಗೆ ಏನು ಕೊಟ್ಟಿದ್ದಾರೆ. ಏನು ಸಿಗುತ್ತದೆ ಎನ್ನುವ ಬಗ್ಗೆ ಬಜೆಟ್‌ನಲ್ಲಿ ಗೊಂದಲವಿದೆ.


ಈ ಬಜೆಟ್‌ಗೆ ದೂರ ದೃಷ್ಟಿಯಿಲ್ಲ. ಇಂಧನ ದರ ಸೆಸ್ ಕಡಿಮೆ ಮಾಡಿ ಜನರ ಹೊರೆ ಇಳಿಸಬೇಕಿತ್ತು. ಆದರೆ ಆ ರೀತಿ ಮಾಡದೇ ಇರುವುದರಿಂದ ಜನರ ಜೇಬಿಗೆ ಕತ್ತರಿ ಬೀಳುವುದು ನಿಲ್ಲಲ್ಲ. ಕಳೆದ ವರ್ಷದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಇನ್ನೂ ಬಂದಿಲ್ಲ. ಇದರ ಬಗ್ಗೆ ಗಮನಹರಿಸಿಲ್ಲ. ಅಲ್ಪ ಸಂಖ್ಯಾತ ಸಮುದಾಯಕ್ಕೆ ಬಜೆಟ್‌ನಲ್ಲಿ ಕಡಿಮೆ ಅನುದಾನ ಮೀಸಲಿರಿಸಿದ್ದಾರೆ.



**ಟಾರ್ಗೆಟ್ ಅಸ್ಲಾಂ**
ಉದ್ಯಮಿಗಳು ದಾವಣಗೆರೆ

# ಅಪರೂಪದ ವಿದ್ಯಾರ್ಥಿ ಸ್ನೇಹಿ ಪಠ್ಯಬಂಧ

ತೊಂಬತ್ತರ ದಶಕದಲ್ಲೇ 'ಕಾಲೇಜು ಕನ್ಯೆಯರ ಕೊಲೆ' ಎಂಬ ಕಾದಂಬರಿಯ ಮೂಲಕ ಕನ್ನಡದ ಓದುಗರಲ್ಲಿ ರೋಮಾಂಚನ ಉಂಟು ಮಾಡಿದ ನಾಗರಾಜು ಗೊಡಬನಹಾಳ್ ಸದಾ ಕ್ರಿಯಾಶೀಲ ವ್ಯಕ್ತಿ. 'ಏನನ್ನಾದರೂ ಮಾಡು ತಮ್ಮ ಸುಮ್ಮನಿರಬ್ಯಾಡ' ಎಂಬ ಅಡಿಗರ ಮಾತಿನಂತೆ ಅವರು ಯಾವಾಗಲೂ ಏನನ್ನಾದರೂ ಮಾಡುತ್ತಲೇ ಇರುತ್ತಾರೆ. ಅದಕ್ಕೆ ಸಾಕ್ಷಿ ಈ "ಪದಬಂಧ" ಪುಸ್ತಕ. ಅನೇಕ ಕೃತಿಗಳನ್ನು, ಸಂಚಿಕೆಗಳನ್ನು ಸಂಪಾದಿಸಿರುವ, ಪ್ರಕಟಿಸಿರುವ ನಾಗರಾಜು ಅವರು, ವಿದ್ಯಾರ್ಥಿಗಳಲ್ಲಿ ಓದಿನಲ್ಲಿ ಅಭಿರುಚಿ ಹುಟ್ಟುವಂತೆ ಮಾಡಬೇಕೆಂಬುದರ ಫಲ-ಈ ಪುಸ್ತಕ.




ನಾಲ್ಕು ಗೋಡೆಗಳ ನಡುವೆ ಬರೀ ಪಾಠ ಕಲಿಯುವ ವಿದ್ಯಾರ್ಥಿಗಳು ಸ್ವಯಂ ತಾವೇ ಓದಿಕೊಳ್ಳಬೇಕಾದಂತಹ ಸ್ಥಿತಿಯನ್ನು ಕೊರೊನಾ ಸೃಷ್ಟಿ ಮಾಡಿದೆ. ಅಂತರ್‌ಜಾಲದ ತರಗತಿಗಳೂ ಆಸಕ್ತಿದಾಯಕವಾಗೇನೂ ಇರುವುದಿಲ್ಲ. ಬಹುಬೇಗ ವಿದ್ಯಾರ್ಥಿಗಳು ಏಕಾಗ್ರತೆಯನ್ನೇ ಕಳೆದುಕೊಳ್ಳು ತ್ತಾರೆ. ಏಕೆಂದರೆ ವಿದ್ಯಾರ್ಥಿಗಳು ಯಾವಾಗಲೂ 'ರಿಸೀವಿಂಗ್ ಎಂಡ್'ನಲ್ಲೇ ಇರುತ್ತಾರೆ.

ನಾಗರಾಜ್ ರವರು ವೃತ್ತಿಯಲ್ಲಿ ನಿವೃತ್ತರಾದರೂ ಸಾಹಿತ್ಯ ರಚನೆಯಲ್ಲಿ ಅವರು ಸದಾ ಪ್ರವೃತ್ತರು. ವಿದ್ಯಾರ್ಥಿಗಳ ಪಠ್ಯಗಳನ್ನೇ ಇರಿಸಿಕೊಂಡು ಪದಬಂಧದ ಆಟವನ್ನು ಮಾಡುವ ಆಟಿಕೆಯನ್ನು ಸಿದ್ಧ ಮಾಡಿ ಪ್ರಕಟಿಸಿದರು. ಅದು ಎಷ್ಟು ಜನಪ್ರಿಯವಾಯಿತು ಅಂದರೆ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವಂತಾಯಿತು.

ಇಲ್ಲಿರುವ ನಲವತ್ತು ಪದಬಂಧಗಳು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಕನ್ನಡ ಪಠ್ಯವನ್ನು ಆಧರಿಸಿ ಇದೆ. ಪ್ರತಿಯೊಂದು ಗದ್ಯ, ಪದ್ಯ, ಹೊಸಗನ್ನಡ, ಹಳೆಗನ್ನಡ-ಎಲ್ಲವನ್ನು ಬಳಸಿಕೊಂಡು ಈ ಪದಬಂಧ ರಚಿಸಿರುವುದೊಂದು ವಿಶೇಷ. 'ಯುದ್ಧ ಮತ್ತು ಶಬರಿ' ಪಠ್ಯವನ್ನು ಓದಿಕೊಂಡರೆ ಪದಬಂಧ-1ನ್ನು ಪೂರ್ಣ ಗೊಳಿಸಲು ಸಾಧ್ಯ. ಹಾಗೆಯೇ ವಿದ್ಯಾರ್ಥಿ ಕಲಿಯುತ್ತಾ, ತಾನು ಓದಿದ್ದನ್ನೇ ಪದಬಂಧ ರಚನೆಯಲ್ಲಿ ಬಳಸಿಕೊಳ್ಳಲು ನೆರವಾಗುವಂತಿದೆ. ಈ ರೀತಿಯಾಗಿ ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ ಹಾಗೂ ನೆನಪಿಟ್ಟುಕೊಳ್ಳುವುದೂ ಸುಲಭವಾಗಿದೆ.

ಈ ಪದಬಂಧದಲ್ಲಿ ಬಳಸಿರುವ ಪದಗಳಾಗಿ ರಲೀ, ತತ್ಸಮ, ತದ್ಭವ, ಸಮಾನಾರ್ಥಕ ಪದ, ನಾನಾರ್ಥಪದ, ಸಂಧಿ, ಸಮಾಸ-ಹೀಗೆ ಎಲ್ಲವನ್ನು ಇಲ್ಲಿ ಆಯಾ ಪಠ್ಯದಿಂದಲೇ ಆರಿಸಿ, ರೂಪಿಸಿ ರುವುದರಿಂದ ಇದೊಂದು ಅದ್ಭುತ ಕಲಿಕಾ ಕಿಟ್ ಆಗಿದೆ. ತರಗತಿಗಳಲ್ಲಿ ಶಿಕ್ಷಕರು ಇದನ್ನು ಪಠ್ಯವಾಗಿ ಬಳಸಿ ವಿದ್ಯಾರ್ಥಿಗಳಿಂದಲೇ ಇದನ್ನು ಮಾಡಿಸಬ ಹುದು. ಕಲಿಯುವ ಸಾಮರ್ಥ್ಯವಿಲ್ಲದ ಕಲಿಕೆ ಯಲ್ಲಿ ಹಿಂದೆ ಬಿದ್ದಿರುವ ವಿದ್ಯಾರ್ಥಿಗಳಿಗಂತೂ ಇದು ತುಂಬಾ ಉಪಯುಕ್ತ. ನಾಗರಾಜ್ ಅವರ ಈ ಮಾದ ರಿಯನ್ನು ಒಂದು ಆದರ್ಶದಂತೆ ಪರಿಭಾವಿಸಿ ಉಳಿದ ವಿಷಯಗಳ ಶಿಕ್ಷಕರೂ ಇದಕ್ಕೆ ಮುಂದಾಗುವಂತಾಗಲಿ.

ಶಿಕ್ಷಣ ಇಲಾಖೆಯು ಇದನ್ನು ಪ್ರಕಟಿಸಿ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ, ತಲುಪು ವಂತಾದರೆ ತುಂಬಾ ಅರ್ಥಪೂರ್ಣವಾಗುತ್ತದೆ. ಆ ಅರ್ಥದಲ್ಲಿ ಕನ್ನಡದ ಕೆಲಸವೂ ಆದಂತಾಗುತ್ತದೆ. ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧಿಸಿದ ಶಿಕ್ಷಣ ಸಚಿವರು ಗಂಭೀರವಾಗಿ ಪರಿಗಣಿಸ ಬೇಕೆಂದು ಒತ್ತಾಯಿಸುತ್ತಾ, ಇಂತಹ ಅಪರೂಪದ ಪಠ್ಯಬಂಧ ರಚಿಸಿದ ಗೊಡಬನಹಾಳ್ ನಾಗರಾಜ್ ಅವರಿಗೆ ಮತ್ತೊಮ್ಮೆ ಅಭಿನಂದಿಸಿ ಇನ್ನಷ್ಟು ಇಂತಹ ಪ್ರಯೋಗಶೀಲ ಪಠ್ಯಬಂಧಗಳನ್ನು ರಚಿಸಲೆಂದು ಆಶಿಸುತ್ತಾ, ಇಂತಹ ಒಂದು ಸಾಹಿತ್ಯಿಕ ಮೌಲ್ಯದ ಶೈಕ್ಷಣಿಕ ಹಿನ್ನೆಲೆಯ ಈ ಉತ್ತಮ ಕೃತಿಯನ್ನು ಪ್ರಕಾಶಕ ಶಿವಕುಮಾರಸ್ವಾಮಿ ಆರ್. ಕುರ್ಕಿ ಇವರು, ತಮ್ಮ ಗ್ರಂಥಸರಸ್ವತಿ ಪ್ರತಿಭಾರಂಗದ ಮೂಲಕ ಕನ್ನಡಸಾರಸ್ವತ ಲೋಕಕ್ಕೆ ಅರ್ಪಿಸುತ್ತಿ ರುವುದು ಪ್ರಶಂಸನಿಯ ಕಾರ್ಯವಾಗಿದೆ.

**- ಡಾ. ಲೋಕೇಶ್ ಅಗಸನಕಟ್ಟೆ**

## ರೂಪಾಯಿ ಹಂಚಿಕೆ ಸಮರ್ಪಕವಾಗಿಲ್ಲ

ರಾಜ್ಯ ಬಜೆಟ್ ಆರ್ಥಿಕ ನಿರ್ವಹಣೆಯ ಲೋಪಗಳನ್ನು ಬಿಂಬಿಸಿದೆ. ಯಾವ ಬಾಬ್ತಿಗೆ ಎಷ್ಟು ಅನುದಾನ ಹಂಚಿಕೆ ಮಾಡಬೇಕು ಎಂಬುದರ ಬಗ್ಗೆ ಸ್ವತಃ ಸಿಎಂ ಅವರೇ ಗೊಂದಲದಲ್ಲಿದ್ದಾರೆ ಎನಿಸುತ್ತದೆ. ಕಲ್ಯಾಣ ಕರ್ನಾಟಕಕ್ಕೆ ಸಿಂಹ ಪಾಲು ಮೊತ್ತವನ್ನು ತೋರಿಸಲಾಗಿದ್ದು, ಯಾವುದಕ್ಕೆ ಎಂದು ಸ್ಪಷ್ಟವಾಗಿ ಹೇಳಿಲ್ಲ. ಜಾತಿ ಅಭಿವೃದ್ಧಿ ನಿಗಮಗಳಿಗೆ ಹೇರಳವಾಗಿ ಸುಮಾರು 2 ಸಾವಿರ ಕೋಟಿ ಅನುದಾನ ಮೀಸಲಿರಿಸಿರುವುದು ಸರಿಯಲ್ಲ. ಜಿಲ್ಲೆಗೆ ಜಯದೇವ ಹೃದಯ ರೋಗ ವಿಜ್ಞಾನದ ಉಪ ಕೇಂದ್ರ ತೆರೆಯಲು ಅನುದಾನ ಬಿಟ್ಟರೆ ಯಾವುದೇ ಘೋಷಣೆ ಮಾಡಿಲ್ಲ. ಈ ಮೂಲಕ ಮಧ್ಯ ಕರ್ನಾಟಕದ ದಾವಣಗೆರೆಗೆ ನಿರಾಶೆಯಾಗಿದೆ. ವಕೀಲರಿಗೆ ಯಾವುದೇ ಯೋಜನೆ ಘೋಷಣೆಯಾಗಿಲ್ಲ.



**ಎಲ್.ಎಚ್.ಅರುಣ್ ಕುಮಾರ್**
ಹಿರಿಯ ವಕೀಲರು

## ಜನತೆಯನ್ನು ಸಾಲಗರಾರನ್ನಾಗಿಸಿದ ಬಜೆಟ್



ಮುಖ್ಯಮಂತ್ರಿಗಳ ಬಜೆಟ್ ಕೇವಲ ಕೆಲವರಿಗೆ ಸೀಮಿತವಾದಂತಿದೆ. ಗೋ ಹತ್ಯೆ ನಿಷೇಧ ಜಾರಿಗೆ ತಂದ ಮುಖ್ಯಮಂತ್ರಿಗಳಿಗೆ ಗೋವುಗಳನ್ನು ಸಾಕಲು ಗೋಶಾಲೆಗಳನ್ನಾದರೂ ತೆರೆಯಬೇಕೆಂಬ ಸಾಮಾನ್ಯ ಜ್ಞಾನವೂ ಸಹ ಇಲ್ಲವೇ ? ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಪ್ರಶ್ನಿಸಿದ್ದಾರೆ.

ಕೃಷಿ, ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಬಜೆಟ್ ನಲ್ಲಿ ಹೆಚ್ಚಿನ ಆದ್ಯತೆ ನೀಡಬೇಕಾಗಿತ್ತು. ನಮಗೂ ಈ ಬಜೆಟ್ ಮೇಲೆ ಬಹಳ ನಿರೀಕ್ಷೆಗಳಿದ್ದವು. ಆದರೆ ಇದಾವುದನ್ನೂ ನೀಡದೇ 2 ಲಕ್ಷ 40 ಸಾವಿರ ಕೋಟಿ ರೂ ಬಜೆಟ್ ಮಂಡಿಸಿದ್ದಾರೆ. ಇದಕ್ಕಾಗಿ ಸುಮಾರು 80 ಸಾವಿರ ಕೋಟಿ ರೂ. ಸಾಲ ಮಾಡಿ ರಾಜ್ಯದ ಜನರನ್ನು ಸಾಲಗಾರರನ್ನಾಗಿಸಿದ್ದಾರೆ ಎಂದವರು ಹೇಳಿದ್ದಾರೆ.

## ಬಿಜೆಪಿ ಮಹಿಳಾ ಮೋರ್ಚಾದಿಂದ ವಿಶ್ವ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 8- ನಗರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಭಾರತೀಯ ಜನತಾ ಪಾರ್ಟಿ ಕಾರ್ಯಾಲಯದಲ್ಲಿ ಆರೋಗ್ಯ ಶಿಬಿರದೊಂದಿಗೆ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಮಹೇಶ್ವರ ವಹಿಸಿದ್ದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ರಾಜ್ಯಕಾರ್ಯದರ್ಶಿ ಸುಧಾ ಜಯರುದ್ರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಮುಖ್ಯ ಅತಿಥಿಗಳಾದ ಡಾ. ಸುಧಾ ಪಾಟೀಲ್, ವೈದ್ಯಕೀಯ ಪ್ರಕೋಷ್ಠದ ಸಹ ಸಂಚಾಲಕರಾದ ಡಾ. ನಂದಿನಿ, ಯೋಗ ಶಿಕ್ಷಕಿ ರತ್ನ, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪುಷ್ಪಾ ವಾಲಿ, ನೇತ್ರ ತಜ್ಞರಾದ ಜೈಕುಮಾರ್, ದಾವಣಗೆರೆ ಉತ್ತರ ಮಂಡಲ ಅಧ್ಯಕ್ಷ ಸಂಗನಗೌಡ್ರು, ದಾವಣಗೆರೆ ಉತ್ತರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷರಾದ ಸರ್ವಮಂಗಳ, ಪ್ರಧಾನ ಕಾರ್ಯದರ್ಶಿ ಎಂ. ಕುಮಾರಿ ಉಪಸ್ಥಿತರಿದ್ದರು.



### ಘನ ದಿವಾಣಿ ನ್ಯಾಯಾಲಯ, ದಾವಣಗೆರೆ

ಪಿ. ಅಂಡ್ ಎಸ್. ಸಿ. ನಂ. 4/2021

**ಅರ್ಜಿದಾರರು : ಶ್ರೀ ಐ. ವಿ. ಮಹಾಬಲೇಶ್ವರ,** ದಿ|| ಐ. ವಿಶ್ವನಾಥಪ್ಪ, ವಯಸ್ಸು ಸುಮಾರು 56 ವರ್ಷ, ವಾಸ: ನಂ. 460, ಬೆಳ್ಳೂಡಿ ಗಲ್ಲಿ ದಾವಣಗೆರೆ.
**ಶ್ರೀ ಐ. ವಿ. ಸುಜಿತ್,** ದಿ|| ಐ. ವಿಶ್ವನಾಥಪ್ಪ, ವಯಸ್ಸು ಸುಮಾರು 55 ವರ್ಷ, ವಾಸ: ನಂ. 460, ಬೆಳ್ಳೂಡಿ ಗಲ್ಲಿ ದಾವಣಗೆರೆ. **ವಿರುದ್ಧ ಎದುರುದಾರರು:** ಯಾರೂ ಇಲ್ಲ

### ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಾಣಿಸಿದ ಅರ್ಜಿದಾರರಗಳು ನಾವು ದಾವಣಗೆರೆ ನಗರದ ಬೆಳ್ಳೂಡಿ ಗಲ್ಲಿ ಯಲ್ಲಿ ವಾಸವಾಗಿದ್ದು ಹಾಗೂ ದಿವಂಗತ ಐ. ವಿಶ್ವನಾಥಪ್ಪರವರ ವಾರಸುದಾರರೆಂದು ಮತ್ತು ಇವರು ಟಾಟಾ ಕಂಪನಿಯ 500, ಗೋದ್ರೆಜ್ ಕಂಪನಿಯ 360, ಕಿರ್ಲೋಸ್ಕರ್ ಕಂಪನಿಯ 1569, ಐಸಿ ಐಸಿ ಐ 266, ಪ್ಲಾಸ್ಟಿ ಬ್ಲೆಂಡ್ ಕಂಪನಿಯ 400, ಇಂಡಿಯನ್ ಬ್ಯಾಂಕ್ 100 ಮತ್ತು ಇಂಡಿಯನ್ ಎಕ್ಸ್‌ಪ್ಲೂಸಿವ್ ಲಿ., 136 ಷೇರುಗಳನ್ನು ಮತ್ತು ಇತರೆ ಸೌಲಭ್ಯಗಳಿಗೆ ತಾವೇ ವಾರಸುದಾರರೆಂದು ಘೋಷಿಸಿ ವಾರಸ ಪತ್ರ ನೀಡಬೇಕೆಂದು ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಅರ್ಜಿಗೆ ಸಂಬಂಧಪಟ್ಟಂತೆ ಯಾರದ್ದಾದರೂ ತಕರಾರು ಇದ್ದರೆ ದಿನಾಂಕ: 25.03.2021ರಂದು ಬೆಳಿಗ್ಗೆ 11-00 ಗಂಟೆಗೆ ವೈಯಕ್ತಿಕವಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಈ ಅರ್ಜಿಯನ್ನು ತೀರ್ಮಾನಿಸಲಾಗುವುದು.

ದಿನಾಂಕ : 26.02.2021ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ನೀಡಿದೆ.

**ಶ್ರೀ ಡಿ. ಎಸ್. ರಾಜಶೇಖರ**
**ದೂರವಾಣಿ: 98804 48882**
**ಅರ್ಜಿದಾರರ ಪರ ನ್ಯಾಯವಾದಿಗಳು, ನಂ. 473, ಜಯಚಂದ್ರ ಕಾಂಪ್ಲೆಕ್ಸ್, 7ನೇ, ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಪಿ. ಜೆ. ಬಡಾವಣೆ, ದಾವಣಗೆರೆ.**

ಶಿರಸ್ತೇದಾರರು,
ಘನ ದಿವಾಣಿ ನ್ಯಾಯಾಲಯ,
ದಾವಣಗೆರೆ.

### ಸಾರ್ವಜನಿಕ ಪ್ರಕಟಣೆ

ಹರಿಹರ ತಾಲ್ಲೂಕು ಚಿಕ್ಕಬಿದಿರೆ ಗ್ರಾಮದ, ಹಾಲಿ ವಾಸ : ಐಗೂರು ಗ್ರಾಮದ ವಾಸಿಯಾದ ಶ್ರೀಮತಿ ಹೆಚ್.ವಿ. ಲಲಿತಮ್ಮ ಕೋಂ ದಿ|| ಹಾಲೇಶಪ್ಪ ಇವರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಹರಿಹರ ತಾಲ್ಲೂಕು ಚಿಕ್ಕಬಿದಿರೆ ಗ್ರಾಮದ ರಿ.ಸ.ನಂ. 75/7 ರಲ್ಲಿ ವಿಸ್ತೀರ್ಣ 0.20.12.00 (ಇಪ್ಪತ್ತು ಮುಕ್ಕಾಲು ಗುಂಟೆ) ಕಸಬಾ ಹೋಬಳಿ, ಚಿಕ್ಕಬಿದಿರೆ ಗ್ರಾಮದ 75/8 ರಲ್ಲಿ ವಿಸ್ತೀರ್ಣ 0.26.04.00 (ಇಪ್ಪತ್ತಾರು ಕಾಲು) ಗುಂಟೆ ಜಮೀನು ಮಾನ್ಯ ಸಿವಿಲ್ ನ್ಯಾಯಾಲಯ, ಹರಿಹರ ಇವರು ಹಿಸ್ಸೆ ಮಾಡಿದ್ದು, ಅದರ ಪ್ರಕಾರ ಖಾತೆ ಬದಲಾವಣೆಯಾಗಿರುತ್ತದೆ. ಇದನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಲ್ಲಿ ಅಪೀಲು ಸಲ್ಲಿಸುವವರಿದ್ದು, ಕೋವಿಡ್ ಬಂದಿದ್ದರ ಕಾರಣ ಮೇಲ್ಮನವಿ ಸಲ್ಲಿಸುವುದು ತಡವಾಗಿರುತ್ತದೆ. ಈ ಸಂದರ್ಭದಲ್ಲಿ ಈ ಕೆಳಕಂಡ ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ, ಕಕ್ಕರಗೊಳ್ಳ ಗ್ರಾಮದ ವಾಸಿಯಾದ ಕೆ.ಬಿ. ಸಿದ್ದೇಶಿ ಬಿನ್ ದಿ|| ಭಿಷಜ್ಞೇಶ್ವರಪ್ಪ ಮತ್ತು ವಿರೂಪಾಕ್ಷ ಬಿನ್ ದಿ|| ಬಿಷಜ್ಞೇಶ್ವರಪ್ಪ ಹಾಗೂ ಕೆ.ಬಿ. ರೂಪ ಬಿನ್ ದಿ|| ಬಿಷಜ್ಞೇಶ್ವರಪ್ಪ ಇವರುಗಳು ಸೇರಿ ಹರಿಹರ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಬಿದಿರೆ ಗ್ರಾಮದ ರಿ.ಸ.ನಂ. 75/7 ಮತ್ತು 75/8ರ ಒಟ್ಟು ವಿಸ್ತೀರ್ಣ ಎಕರೆ 1 ಗುಂಟೆ 27ರ ಜಮೀನನ್ನು ಮಾರಾಟ ಮಾಡುವ ಹುನ್ನಾರ ನಡೆಸುತ್ತಿರುವ ವಿಚಾರವು ನನ್ನ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಈ ಷೆಡ್ಯೂಲ್ ಆಸ್ತಿಯನ್ನು ಸಾರ್ವಜನಿಕರು ಯಾರೂ ಸಹ ಖರೀದಿಸಬಾರದೆಂದು, ಒಂದು ವೇಳೆ ಖರೀದಿ ಮಾಡಿದರೆ ಮುಂದೆ ಆಗಬಹುದಾದ ಕಾನೂನಿನ ತೊಡಕುಗಳಿಗೆ ನೀವೇ ಬಾಧ್ಯಸ್ಥರಾಗಿರುತ್ತೀರಿ ತಿಳಿಯಿರಿ.

**ಷೆಡ್ಯೂಲ್ : ಹರಿಹರ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಬಿದಿರೆ ಗ್ರಾಮದ ರಿ.ಸ. ನಂ. 75/7 ಮತ್ತು 75/8 ರ ಒಟ್ಟು ವಿಸ್ತೀರ್ಣ ಎಕರೆ 1, ಗುಂಟೆ 27ಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ದಿಬ್ಬದ ಹನುಮಂತಪ್ಪನವರ ಜಮೀನು, ಉತ್ತರಕ್ಕೆ : ಲಲಿತಮ್ಮ ಕೋಂ ದಿ|| ಹಾಲೇಶಪ್ಪನವರ ಜಮೀನು, ದಕ್ಷಿಣಕ್ಕೆ : ಬಂಡಿ ದಾರಿ.**

**ಸ್ಥಳ : ದಾವಣಗೆರೆ.**
**ದಿನಾಂಕ : 08.03.2021**

**ಸಹಿ/- ಪಿ.ಬಿ. ಮಂಜುನಾಥ್**
**ಬಿ.ಎ., ಎಲ್.ಎಲ್.ಬಿ., ವಕೀಲರು**
**(ಹೆಚ್.ವಿ. ಲಲಿತಮ್ಮ) 88847 20306**

# ಏ.3 ಕ್ಕೆ ಬೀರದೇವರ ಗುಡಿ, ಹಾಸ್ಟೆಲ್, ಸಮುದಾಯ ಭವನ ಲೋಕಾರ್ಪಣೆ



ಮಲೇಬೆನ್ನೂರು, ಮಾ.8- ಕಾಗಿನೆಲೆ ಕನಕ ಗುರು ಪೀಠದ ಬೆಳ್ಳೂಡಿ ಶಾಖಾ ಮಠದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಹೊರ ಬೀರ ದೇವರ ದೇವಸ್ಥಾನ, ಸಮುದಾಯ ಭವನ, ಮುಖ್ಯ ದ್ವಾರ, ವಿದ್ಯಾರ್ಥಿ ನಿಲಯ ಹಾಗೂ ಹಾಲುಮತ ಸಮಾಜದ ಮಹಾ ದಾರ್ಶನಿಕರ ಪುತ್ಥಳಿಗಳ ಲೋಕಾರ್ಪಣೆ ಸಮಾರಂಭವನ್ನು ಏಪ್ರಿಲ್ 3, 4 ಮತ್ತು 5 ರಂದು ಹಮ್ಮಿಕೊಳ್ಳಲು ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಭಾನುವಾರ ಶ್ರೀ ನಿರಂಜನಾನಂದಪುರಿ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಶಾಸಕ ಎಸ್. ರಾಮಪ್ಪ, ಜಿ.ಪಂ. ಮಾಜಿ ಅಧ್ಯಕ್ಷ ಜಿ. ದ್ಯಾಮಣ್ಣ, ನಿವೃತ್ತ ಅಧಿಕಾರಿಗಳಾದ ಭಾನುವಳ್ಳಿ ಚಂದ್ರಪ್ಪ, ಕುಣೆಬೆಳಕೆರೆ ದೇವೇಂದ್ರಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಐರಣಿ ಅಣ್ಣಪ್ಪ, ಉದ್ಯಮಿ ನಂದಿಗಾವಿ ಶ್ರೀನಿವಾಸ್, ಜಿಗಳಿಯ ಡಿ.ಹೆಚ್. ಮಂಜುನಾಥ್, ಭಾನುವಳ್ಳಿಯ ಕೆ. ಬೀರಪ್ಪ, ತಾಲ್ಲೂಕು ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ. ಗಂಗಾಧರ್, ಮಲ್ಲನಾಯ್ಕನಹಳ್ಳಿ ಅಶೋಕ್, ಮಲೇಬೆನ್ನೂರಿನ ಬಿ. ಚಂದ್ರಪ್ಪ, ಬಿ. ಮಂಜುನಾಥ್ ಇನ್ನಿತರೆ ಗಣ್ಯರು ಭಾಗವಹಿಸಿದ್ದರು.

## ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಗಣಕೀಕರಣದ ತಾಂತ್ರಿಕ ಸಮಸ್ಯೆ

ದಾವಣಗೆರೆ, ಮಾ. 8-ಹಿರಿಯ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಕಳೆದ ಮಾರ್ಚ್ 1 ರಿಂದಲೂ ಗಣಕೀಕರಣದ ತಾಂತ್ರಿಕ ಸಮಸ್ಯೆ ಉಂಟಾಗಿದ್ದು, ಸಾರ್ವಜನಿಕರು ಸಹಕರಿ ಸುವಂತೆ ಹಿರಿಯ ಉಪ ನೋಂದಣಾಧಿಕಾರಿ ಗಳಾದ ಎಲ್.ರಾಮಕೃಷ್ಣ, ಜಿ. ಪ್ರಸನ್ನ ಮನವಿ ಮಾಡಿದ್ದಾರೆ. ಸರ್ವರ್ ಸಮಸ್ಯೆಯಿಂದ ತಾತ್ಕಾಲಿಕವಾಗಿ ನೋಂದಣಿ ಕಾರ್ಯ ಸ್ಥಗಿತಗೊಂಡಿದೆ. ಆದಷ್ಟು ಶೀಘ್ರವಾಗಿ ಸಮಸ್ಯೆ ನಿವಾರಿಸಿ, ಸಾರ್ವಜನಿಕರಿಗೆ ತಿಳಿಸಿದ ನಂತರವೇ ನೋಂದಣಿ ಕಾರ್ಯಕ್ಕೆ ಕಚೇರಿಗೆ ಆಗಮಿಸುವಂತೆ ಅವರು ಹೇಳಿದ್ದಾರೆ. ಪತ್ರ ಬರಹಗಾರರ ಸಂಘದ ಅಧ್ಯಕ್ಷ ಸಂಗಮೇಶ್ ಎಲಿಗಾರ್ ಸಹ ಸಾರ್ವಜನಿಕರು ಸಹಕರಿಸುವಂತೆ ಮನವಿ ಮಾಡಿದ್ದಾರೆ.

## ಬಡವರ ಸಮಸ್ಯೆಗೆ ಸ್ಪಂದಿಸದೇ ಲೆಕ್ಕಪತ್ರ ನೀಡಿದ ಸಿಎಂ



ದಾವಣಗೆರೆ: ಬಜೆಟ್ ಮೇಲೆ ರಾಜ್ಯದ ಜನರು ಬಹಳಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದರು. ಆದರೆ ಜನರ ನಿರೀಕ್ಷೆಗಳನ್ನು ಮುಖ್ಯಮಂತ್ರಿಗಳು ಹುಸಿಗೊಳಿಸಿದ್ದಾರೆ ಎಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೊನೆಪಕ್ಷ ಮುಖ್ಯಮಂತ್ರಿಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನಾದರೂ ಕಡಿಮೆಗೊಳಿಸಿದ್ದರೆ ದಿನನಿತ್ಯ ವಸ್ತುಗಳ ಬೆಲೆ ಕಡಿಮೆ ಆಗುತ್ತಿತ್ತು. ದಿನನಿತ್ಯ ವಸ್ತುಗಳ ಬೆಲೆಯೇರಿಕೆಗೆ ಕಡಿವಾಣ ಹಾಕಬಹುದೆಂಬ ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ, ಕೇವಲ ಲೆಕ್ಕ-ಪತ್ರ ನೀಡಿದ್ದಾರೆ ಎಂದು ಟೀಕಿಸಿದ್ದಾರೆ.

# ಹೆಣ್ಣಾಗಲಿ-ಗಂಡಾಗಲಿ ಮಕ್ಕಳೇ, ಅಂಧ ವಿಶ್ವಾಸ ಬೇಡ



### ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸದಾಶಯ

ದಾವಣಗೆರೆ, ಮಾ.8- ಹೆಣ್ಣಾಗಲಿ, ಗಂಡಾಗಲಿ ಮಕ್ಕಳೇ. ಅವರನ್ನೇ ಅಭಿಮಾನದಿಂದ ಬೆಳೆಸಿ, ಅವರಲ್ಲೇ ಎಲ್ಲವನ್ನೂ ಕಾಣಬೇಕು. ಆದರೆ, ಗಂಡೇ ಬೇಕೆಂಬ ಅಂಧ ವಿಶ್ವಾಸಕ್ಕೆ ಒಳಗಾಗಬಾರದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ಅವರು, ಇಂದು ಸಂಜೆ ನಗರದ ವನಿತಾ ಸಮಾಜದ ಆವರಣದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವನಿತಾ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವ್ಯಕ್ತಿಯೋರ್ವನ ಪತ್ನಿಗೆ ಹೆಣ್ಣುಮಕ್ಕಳೇ ಆದವು. 14ನೇ ಡೆಲಿವರಿ ವೇಳೆಯೂ ಹೆಣ್ಣಾಯಿತು. ಆದರೆ, ಆ ಮಹಿಳೆ ಸಾವನ್ನಪ್ಪಿದಳು. ಈತ ಪುನಃ ವಿವಾಹವಾದ. ನಿನಗೆ ಗಂಡು ಮಗು ಆಗುವುದೆಂದು ಈತನಿಗೆ ಯಾರೋ ತಿಳಿಸಿದ್ದರಂತೆ. ಹಾಗಾಗಿ ಆತ ಗಂಡು ಮಗುವಿನ ಆಸೆ ಹೊಂದಿದ್ದ. ಇಂತಹ ಅಂಧ ವಿಶ್ವಾಸಕ್ಕೆ ಒಳಗಾಗಬಾರದು. ಯಾಕೆ ಹೆಣ್ಣುಮಕ್ಕಳು ಮಕ್ಕಳಲ್ಲವೇ ? ಯಾವ ವಿಷಯದಲ್ಲಿ ಕಡಿಮೆ ಇದ್ದಾರೆ. ಕೆಲವರಿಗೆ ಮಕ್ಕಳ ಸೌಭಾಗ್ಯವೇ ಇರುವುದಿಲ್ಲ. ವಿಶೇಷವಾಗಿ ಮಕ್ಕಳಿಲ್ಲದ ಸಾಕಷ್ಟು ಐಎಎಸ್ ಅಧಿಕಾರಿಗಳು ದತ್ತು ಪಡೆಯುವುದು ಹೆಣ್ಣುಮಕ್ಕಳನ್ನೇ ಎಂದು ಹೇಳಿದರು.

ಹೆಣ್ಣುಮಕ್ಕಳಲ್ಲಿರುವ ಅದ್ಭುತ ಶಕ್ತಿ ಬೇರೆ ಯಾರಲ್ಲೂ ಇಲ್ಲ. ಹೆಣ್ಣುಮಕ್ಕಳು ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯವಿದೆ. ಕುಟುಂಬವನ್ನಾಗಲೀ, ಸಮಾಜವನ್ನಾಗಲೀ ಉನ್ನತ ಮಟ್ಟಕ್ಕೆ ಏರಿಸಬಲ್ಲರು. ಅಂತಹ ಅಗಾಧ ಶಕ್ತಿ ಇದೆ. ಪುರುಷ ಪ್ರಧಾನ ಸಮಾಜದಲ್ಲಿ ಪ್ರತಿಯೊಬ್ಬ ಪುರುಷನ ಯಶಸ್ಸಿನ ಹಿಂದೆ ಹೆಣ್ಣುಮಕ್ಕಳ ಪಾತ್ರ ಬಹು ಮುಖ್ಯವಾಗಿರುತ್ತದೆ. ನನ್ನ ಜೀವನದ ಯಶಸ್ಸಿನಲ್ಲೂ ಸಹ ಮೊದಲಿಗೆ ಅವ್ವ, ಹೆಂಡತಿಯ ಪಾತ್ರವೂ ಇದೆ. ಹೆಣ್ಣುಮಕ್ಕಳಲ್ಲಿ ಸಾಕಷ್ಟು ಸಕಾರಾತ್ಮಕ ಶಕ್ತಿ ಇದೆ. ಅವರನ್ನು ನಾವು ಗೌರವದಿಂದ ಕಾಣಬೇಕು. ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಯಾವುದೂ ಅಸಾಧ್ಯವಲ್ಲ, ಎಲ್ಲವೂ ಸಾಧ್ಯವಿದೆ ಎಂಬುದನ್ನು ತೋರಿಸಬಲ್ಲರು ಎಂದರು.

ಯಾರ ಮನೆ ತಣ್ಣಗಿರುವುದೋ ಅವರ ಕಚೇರಿಯೂ ತಣ್ಣಗಿರಲಿದೆ. ಸಮಾಜದಲ್ಲಿ ಸಕ್ರಿಯವಾಗಿ ಓಡಾಡಿ ಕೆಲಸ ಮಾಡಲು ಸಾಧ್ಯವಾಗಲಿದೆ. ನಾವು ಸಹ ಸಕ್ರಿಯವಾಗಿ ಓಡಾಡಿ ಕೆಲಸ ಮಾಡುತ್ತೇವೆಂದರೆ ಅದಕ್ಕೆ ಧರ್ಮಪತ್ನಿ, ಮಾತೃಶ್ರೀ ಅವರ ಪ್ರೋತ್ಸಾಹವೇ ಕಾರಣವೆಂದರು.

ಅಂತರರಾಷ್ಟ್ರೀಯ ಪುರುಷರ ದಿನಾಚರಣೆ ಯಾಕಿಲ್ಲ. ಒಮ್ಮೆಯಾದರೂ ಯಾರೂ ಮಾಡಲ್ಲ. ಆದರೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹುಮ್ಮಸ್ಸು, ಹುರುಪಿನಿಂದ ನಾನಾ ಚಟುವಟಿಕೆಗಳಿಂದ ಆಚರಿಸಲಾಗುತ್ತಿದೆ. ಇಡೀ ಜಗತ್ತಿನ ಸಮತೋಲನಕ್ಕೆ ಕಾರಣ ಮಹಿಳೆಯರು. ಹುಮ್ಮಸ್ಸಿನಿಂದ ನಿಮ್ಮ ಬದುಕಿನ ರೀತಿ ಮೆಲುಕು ಹಾಕಿ ಕೃತಜ್ಞತೆ ಹೇಳುವುದೇ ಮಹಿಳಾ ದಿನವೆಂದರು. ನಾವು ಬೇರೆಯವರಿಗೆ ಜೈ ಎನ್ನುವುದಕ್ಕೂ ಮುನ್ನ ನಮಗೆ ನಾವು ಜೈ ಎಂದಾಗ ಸಮಾಜ ನಮ್ಮನ್ನು ಬಹಳಷ್ಟು ಗುರುತಿಸಲಿದೆಯಲ್ಲದೇ, ಸತ್ಕಾರ್ಯಗಳ ಮಾಡಲು ದಾರಿಯಾಗಲಿದೆ ಎಂದರು.

ವನಿತಾ ಸಮಾಜದ ಅಧ್ಯಕ್ಷೆ ನಾಗರತ್ನ ಜಗದೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಇದೇ ವೇಳೆ ಉಮಾ ನಾಗರಾಜ್ ಅವರಿಗೆ ವನಿತಾ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಶಾಂತಕುಮಾರಿ ಶಶಿಧರ್, ಕಾರ್ಯದರ್ಶಿ ಪದ್ಮಾ ಪ್ರಕಾಶ್ ಸೇರಿದಂತೆ ಇತರರು ಇದ್ದರು.

### ಹೆಣ್ಣುಮಗಳ ತಂದೆಯೆಂಬ ಹೆಮ್ಮೆ ನನಗಿದೆ : ಡಿಸಿ

ನನ್ನೂರಿಗೆ ಯೋಗಕ್ಷೇಮ ವಿಚಾರಿಸಲೆಂದು ಹೋದಾಗ ಕುಟುಂಬದ ಹಿರಿಯೋರ್ವರು ನನಗೆ ಪುತ್ರನಾಗಲೆಂದು ಹರಸಿದರು. ಆದರೆ ನನಗೆ ಓರ್ವ ಪುತ್ರಿ ಇರುವುದು ಖುಷಿ ತಂದಿದೆ. ಅಲ್ಲದೇ ಹೆಣ್ಣುಮಗಳ ತಂದೆ ಎಂಬ ಹೆಮ್ಮೆ ನನಗಿದೆ. ಹತ್ತು ಮಂದಿಯ ಸಾಮರ್ಥ್ಯ, ಶಕ್ತಿ ಒಬ್ಬಳಲ್ಲೇ ಇದೆ. ನನ್ನ ಮಗಳು ನನ್ನಯ ಮನಸ್ಥಿತಿ ಅರಿತು ಬಳಿ ಬಂದು ಯೋಗಕ್ಷೇಮ ವಿಚಾರಿಸುವಳು. ಅದೇ ಕೆಲ ಗಂಡು ಮಕ್ಕಳು ರೊಕ್ಕದ ಅವಶ್ಯವಿದ್ದಾಗ ಮಾತ್ರ ಬಳಿ ಬರುತ್ತಾರೆ. ಕರುಳ ಪ್ರೇಮವುಳ್ಳ, ಮನ ಮಿಡಿಯುವವರೇ ಹೆಣ್ಣುಮಕ್ಕಳು. ಅನಾವಶ್ಯಕವಾಗಿ ಹೆಚ್ಚಿನ ಮಕ್ಕಳು ಹೊಂದುವ ದುಸ್ಸಾಹಸಕ್ಕೆ ಕೈ ಹಾಕದೇ ಒಂದು ಅಥವಾ ಎರಡು ಮಕ್ಕಳನ್ನು ಹೊಂದಬೇಕು.

## ಗಣಿಗಾರಿಕೆ ಸುಧಾರಣೆಗೆ ಖನಿಜ ನೀತಿ

ಬೆಂಗಳೂರು, ಮಾ. 8 - ಗಣಿಗಾರಿಕೆ ಕ್ಷೇತ್ರದಲ್ಲಿ ಇನ್ನಷ್ಟು ಸುಧಾರಣೆ ತರುವಲ್ಲಿ ರಾಷ್ಟ್ರೀಯ ಖನಿಜ ನೀತಿಗೆ ಅನುಗುಣವಾಗಿ ರಾಜ್ಯ ಸರ್ಕಾರ 2021-26ನೇ ಸಾಲಿನ ರಾಜ್ಯ ಖನಿಜ ನೀತಿ ಜಾರಿ ಮಾಡಲಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಧಾನಸಭೆಯಲ್ಲಿಂದು ಘೋಷಿಸಿದ್ದಾರೆ.

2021-22ನೇ ಸಾಲಿನ ಬಜೆಟ್ ಮಂಡನೆ ಮಾಡಿದ ಅವರು, ರಾಷ್ಟ್ರೀಯ ಖನಿಜ ಕಾರ್ಯ ನೀತಿಗೆ ಸಮನಾಗಿ 2021-26ನೇ ಸಾಲಿನ ರಾಜ್ಯ ಖನಿಜ ನೀತಿಯನ್ನು ರೂಪಿಸಲಿದ್ದೇವೆ ಎಂದರು. ಗಣಿ/ಕಲ್ಲು ಗಣಿ ಗುತ್ತಿಗೆ ಮತ್ತು ಕ್ರಷರ್ ಲೈಸೆನ್ಸ್ ಕೋರಿ ಸಲ್ಲಿಸುವ ಅರ್ಜಿಗಳನ್ನು ನಿಗದಿತ ಸಮಯದೊಳಗೆ ವಿಲೇವಾರಿ ಮಾಡುವ ಸದುದ್ದೇಶದಿಂದ ಇದೇ ಮೊದಲ ಬಾರಿಗೆ ಏಕಗವಾಕ್ಷಿ ಪದ್ಧತಿ ಜಾರಿ ಮಾಡಲಾಗುವುದು ಎಂದು ಹೇಳಿದ್ದಾರೆ.

## ನಗರದ ಮಹಿಳಾ ದಿನಾಚರಣೆಯಲ್ಲಿ ಚಿತ್ರನಟಿಯರು



ದಾವಣಗೆರೆ, ಮಾ.8 - ಕನ್ನಡ ಚಲನಚಿತ್ರ ನಟಿ ಶ್ರೀ ರೂಪಿಕ, ರೂಪದರ್ಶಕಿ ಶ್ರೀ ಮಮತ ದಾವಣಗೆರೆಯ ಗಡಿಯಾರ ಕಂಬದ ಬಳಿ ಶ್ರೀಧರ ಶೆಟ್ಟಿ ಸ್ವೀಟ್ ಸ್ಟಾಲ್‌ನಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಪಿ.ಸ್.ಐ. ಲಲಿತ, ಸಿಬ್ಬಂದಿಗಳಾದ ಪ್ರತಿಭಾ ಲಕ್ಷ್ಮಿ, ಆರ್ಶಿಯ, ಮಹಾನಗರ ಪಾಲಿಕೆ ಆರೋಗ್ಯ ನಿರೀಕ್ಷಕಿ ಮಧುಶ್ರೀಯವರಿಗೆ ಸಾಂಕೇತಿಕವಾಗಿ ಶಾಲು ಹೊದಿಸಿ ಎಲ್ಲಾ ಮಹಿಳೆಯರಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಕೋರಿದರು.

ರೂಪಿಕ ಹಾಗೂ ಮಮತ ರವರಿಗೆ ಶ್ರೀಮತಿ ರೂಪ ರಾಘವೇಂದ್ರ ಶೆಟ್ಟಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಡಾ. ಟಿ.ಎ. ಶರವಣ ಅಭಿಮಾನಿ ಬಳಗದ ಅಧ್ಯಕ್ಷ ಬಿ.ಎಸ್. ರಾಘವೇಂದ್ರ ಶೆಟ್ಟಿ, ಮಹಾನಗರ ಪಾಲಿಕೆ ಮಾಜಿ ಸದ್ಯಸ ಪಿ. ಎನ್. ಚಂದ್ರಶೇಖರ್, ಹಾಲಿ ಮಹಾನಗರ ಪಾಲಿಕೆ ಸದಸ್ಯ ಶಿವನಗೌಡ ಪಾಟೀಲ್, ಮಾಸ್ಟರ್ ಮಹಲಿಂಗಪ್ಪ, ಆದಿತ್ಯ ಕೆ.ಆರ್, ರೂಪೇಶ್, ಆದಿತ್ಯ ಜೆ. ಜಿ.ತಿಲಕ್ ಶೆಟ್ಟಿ, ಕೀರ್ತಿ ರಾಕೇಶ್ ಇದ್ದರು.

### ನಾಗಬಸಪ್ಪ ಅವರಿಗೆ ಎಸ್.ಎ.ಆರ್. ಸಂತಾಪ

ದಾವಣಗೆರೆ, ಮಾ. 8 - ಎಪಿಎಂಸಿ ವರ್ತಕರಾದ ಎಲೆಬೇತೂರಿನ ಎಂ. ನಾಗಬಸಪ್ಪ ಅವರ ನಿಧನಕ್ಕೆ ಶಾಸಕ ಎಸ್.ಎ. ರವೀಂದ್ರನಾಥ್ ಸಂತಾಪ ವ್ಯಕ್ತಪಡಿಸಿದ್ದಾರೆ.

## ವಿಧಾನಸಭೆಯಲ್ಲಿ ಮೊಳಗಿದ ಜೈ ಶ್ರೀರಾಮ್ ಘೋಷಣೆ

ಬೆಂಗಳೂರು, ಮಾ. 8 - ಪಶ್ಚಿಮ ಬಂಗಾಳದ ನಂತರ ಇದೀಗ ಜೈ ಶ್ರೀರಾಮ್ ಘೋಷಣೆ ಕರ್ನಾಟಕದ ರಾಜಕಾರಣದಲ್ಲೂ ಮೊಳಗುವ ಮುನ್ಸೂಚನೆ ವಿಧಾನಸಭೆಯಲ್ಲಿಂದು ಕಂಡುಬಂದಿತು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 2021-22 ನೇ ಸಾಲಿನ ಬಜೆಟ್ ಮಂಡನೆಯನ್ನು ಕಾಂಗ್ರೆಸ್ ಸದಸ್ಯರು ಬಹಿಷ್ಕರಿಸಿ ಸಭಾತ್ಯಾಗ ಮಾಡುತ್ತಿರುವ ವೇಳೆ ಸದನದಲ್ಲಿ ಜೈ ಶ್ರೀರಾಮ್ ಘೋಷಣೆ ಮೊಳಗಿತು.

ಯಡಿಯೂರಪ್ಪ ಬಜೆಟ್ ಓದಲು ಆರಂಭಿಸುತ್ತಿದ್ದಂತೆಯೇ ಕಾಂಗ್ರೆಸ್ ಸದಸ್ಯರು ವಿರೋಧ ವ್ಯಕ್ತಪಡಿಸಿ, ಜಲ ಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ರಾಸಲೀಲೆ ಪ್ರಕರಣಕ್ಕೆ ಸಿಲುಕಿ ಮಂತ್ರಿಗಿರಿಗೆ ರಾಜೀನಾಮೆ ನೀಡಿದ್ದಾರೆ, ಇದೇ ರೀತಿ 6 ಮಂದಿ ಸಚಿವರು ತಮ್ಮ ವಿರುದ್ಧ ಸಿ.ಡಿ. ಪ್ರಸಾರವಾಗಬಹುದು ಎಂಬ ಹೆದರಿಕೆಯಿಂದ ತಡೆಯಾಜ್ಞೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದಾರೆ ಎಂದು ಕೂಗಾಡಿದರು. ಪ್ರತಿಪಕ್ಷ ನಾಯಕ ಸಿದ್ಧರಾಮಯ್ಯ ಮಾತನಾಡಿ, ಅರ್ಧಕ್ಕರ್ಧ ಸಚಿವ ಸಂಪುಟವೇ ಭಯದಿಂದ ತತ್ತರಿಸುತ್ತಿರುವಾಗ ಬಜೆಟ್ ಮಂಡಿಸಿ ಜನರಿಗೇನು ಶಕ್ತಿ ತುಂಬುತ್ತೀರಿ? ಎಂದು ಪ್ರಶ್ನಿಸಿದರು.

ಈ ಮಾತನ್ನು ಬಿಜೆಪಿ ಸದಸ್ಯರು ವಿರೋಧಿಸಿದಾಗ ಸದನದಲ್ಲಿ ಗದ್ದಲ-ಕೋಲಾಹಲ ಆರಂಭವಾಯಿತಲ್ಲದೆ, ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವೆ ಏರಿದ ಧ್ವನಿಯಲ್ಲಿ ಆರೋಪ-ಪ್ರತ್ಯಾರೋಪಗಳು ಕೇಳಿಬಂದವು.

ಬಜೆಟ್ ಮಂಡಿಸುವ ನೈತಿಕ ಅರ್ಹತೆ ಇಲ್ಲ, ನಿಮ್ಮ ನಡೆಯನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇವೆ ಎಂದು ಹೊರ ನಡೆಯಲು ಮುಂದಾದರು.

ಇದನ್ನು ತೀವ್ರವಾಗಿ ಟೀಕಿಸಿದ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ವಿಧಾನಸಭೆಯ ಇತಿಹಾಸದಲ್ಲೇ ಹಿಂದೆಂದೂ ಇಂತಹ ಘಟನೆ ನಡೆದಿಲ್ಲ, ಇದಕ್ಕೆ ಕಾರಣವಾದ ಕಾಂಗ್ರೆಸ್ ನಡೆ ನಾಚಿಕೆಗೇಡಿನದು ಎಂದು ತಿರುಗೇಟು ನೀಡಿದಾಗ ಸದನದಲ್ಲಿ ಮತ್ತೆ ಭಾರೀ ಗದ್ದಲ ಉಂಟಾಯಿತು.

ಈ ನಡುವೆ ಬಿಜೆಪಿ ಸದಸ್ಯರಿಂದ ಜೈ ಶ್ರೀರಾಮ್ ಘೋಷಣೆ ಮೊಳಗಿ ಸದನದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು.

## ಗುಳ್ಳಮ್ಮ ದೇವಸ್ಥಾನದಲ್ಲಿ ಇಂದು ವಾರ್ಷಿಕೋತ್ಸವ



ದಾವಣಗೆರೆ ಪಿ.ಬಿ. ರಸ್ತೆ ಪಿಸಾಳೆ ಕಾಂಪೌಂಡ್, 3ನೇ ಕ್ರಾಸ್‌ನಲ್ಲಿರುವ ಶ್ರೀನಿವಾಸ ಸೇವಾ ಸಂಘದ ವತಿಯಿಂದ ಶ್ರೀ ಗುಳ್ಳಮ್ಮದೇವಿ ದೇವಸ್ಥಾನದ 3 ನೇ ವಾರ್ಷಿಕೋತ್ಸವದ ಕಾರ್ಯಕ್ರಮಗಳು ಇಂದು ನಡೆಯಲಿವೆ.

ಬೆಳಿಗ್ಗೆ 7 ರಿಂದ 8 ಅಭಿಷೇಕ, 9 ಕ್ಕೆ ಗಣ ಹೋಮ, ನವಗ್ರಹ ಹೋಮ, ದೇವಿ ಹೋಮ, 12 ರಿಂದ 12.30 ರವರೆಗೆ ಪೂರ್ಣಾಹುತಿ, ಮಹಾಮಂಗಳಾರತಿ ನಂತರ ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿತರಿಸಲಾಗುವುದು.

## ಅಭಿವೃದ್ಧಿಗೆ ಪೂರಕವಲ್ಲದ ಟೊಳ್ಳು ಬಜೆಟ್ : ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ

ಬೆಂಗಳೂರು, ಮಾ. 8 - ಅನೈತಿಕ ಬಿಜೆಪಿ ಸರ್ಕಾರದ ಬಜೆಟ್ ಕೂಡ ಅನೈತಿಕ ಎಂದಿರುವ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಅಭಿವೃದ್ಧಿಗೆ ಪೂರಕವಲ್ಲದ ಗೊತ್ತುಗುರಿಯಿಲ್ಲದ ಟೊಳ್ಳು ಮುಂಗಡ ಪತ್ರ ಮಂಡಿಸಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ನಗರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ಆಪರೇಷನ್ ಕಮಲ ಎಂಬ ಅನೈತಿಕ ರಾಜಕೀಯದ ಮೂಲಕ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರ ರಾಜ್ಯವನ್ನು ದಶಕಗಳ ಹಿಂದಕ್ಕೆ ಒಯ್ಯುವ 'ಆಪರೇಷನ್ ಬರ್ಬಾದ್' ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡುತ್ತಿದೆ. ಇದಕ್ಕೆ ಕಳೆದ ಮತ್ತು ಈ ವರ್ಷದ ಎರಡು ಬಜೆಟ್‌ಗಳೇ ಸಾಕ್ಷಿ ಎಂದು ಲೇವಡಿ ಮಾಡಿದ್ದಾರೆ.

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಸರ್ಕಾರ ಪಾರದರ್ಶಕವಾಗಿ ಕೆಲಸ ಮಾಡಬೇಕೆನ್ನುವುದು ಸಂವಿಧಾನಬದ್ಧ ಬದ್ಧತೆ. ಆದರೆ, ಬಿಜೆಪಿಯದ್ದು ಮುಚ್ಚುಮರೆಯ ಸರ್ಕಾರ. ಈ ಬಜೆಟ್‌ನಲ್ಲಿ ಸರ್ಕಾರ ಬಿಚ್ಚಿಟ್ಟಿದ್ದಕ್ಕಿಂತ ಮುಚ್ಚಿಟ್ಟಿದ್ದೇ ಹೆಚ್ಚು. ಆಯವ್ಯಯವನ್ನು ಇಲಾಖಾವಾರು ನೀಡದೆ 6 ವಲಯಗಳಾಗಿ ವಿಂಗಡಿಸಿ, ಯಾವ ಇಲಾಖೆಗೆ ಎಷ್ಟು ಅನುದಾನ ನೀಡಲಾಗಿದೆ? ಇಲಾಖೆಗಳ ಕಾರ್ಯಕ್ರಮಗಳೇನು? ಕಳೆದ ವರ್ಷದ ಸಾಧನೆಗಳೇನು? ಹೊಸ ಯೋಜನೆಗಳೇನು? ಎಂಬ ವಿವರಗಳೇ ಇಲ್ಲ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಂಕಷ್ಟಗಳ ಸರಮಾಲೆಗೆ ಸಿಲುಕಿರುವ ರೈತರು ದೇಶಾದ್ಯಂತ ಬೀದಿಗಿಳಿದಿದ್ದಾರೆ. ಕೃಷಿ ವಿರೋಧಿ ಕಾಯ್ದೆಗಳ ಮೂಲಕ ರೈತರನ್ನು ದಿವಾಳಿ ಮಾಡಲು ಹೊರಟಿರುವ ಕೇಂದ್ರ ಸರ್ಕಾರದ ಜೊತೆ ಸೇರಿರುವ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲೂ ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸಿದೆ ಎಂದವರು ಆರೋಪಿಸಿದ್ದಾರೆ.

## ಸಿದ್ದರಾಮಯ್ಯ ಶಾಶ್ವತವಾಗಿ ಪ್ರತಿಪಕ್ಷದಲ್ಲಿ : ಯಡಿಯೂರಪ್ಪ

ಬೆಂಗಳೂರು, ಮಾ. 8 – ಬಜೆಟ್ ಮಂಡನೆಯ ವೇಳೆ ಕಾಂಗ್ರೆಸ್ ಸಭಾತ್ಯಾಗ ಮಾಡಿರುವುದನ್ನು ಖಂಡಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ದೇಶದಲ್ಲಿ ಈ ರೀತಿಯ ಘಟನೆ ಎಂದೂ ನಡೆದಿರಲಿಲ್ಲ ಎಂದಿದ್ದಾರೆ.

ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಮುಂದುವರೆಯುವ ನೈತಿಕತೆ ಕಳೆದುಕೊಂಡಿದೆ ಎಂದು ಆರೋಪಿಸಿದ್ದ ಕಾಂಗ್ರೆಸ್, ಸದನದಿಂದ ಸಭಾತ್ಯಾಗ ಮಾಡಿತ್ತು. ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಯಡಿಯೂರಪ್ಪ, ಬಜೆಟ್ ಮಂಡನೆ ವೇಳೆ ಸಭಾತ್ಯಾಗ ಮಾಡಿದ ಘಟನೆ ಸಂಸತ್ತಿನಲ್ಲಿ ಇಲ್ಲವೇ ಯಾವುದೇ ವಿಧಾನಸಭೆಯಲ್ಲಿ ನಡೆದಿರಲಿಲ್ಲ. ಅವರು ಯಾವ ನೈತಿಕತೆ ಬಗ್ಗೆ ಮಾತನಾಡುತ್ತಿದ್ದಾರೆ? ನಾಳೆ ಅವರ ನೈತಿಕತೆ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡುತ್ತೇನೆ ಎಂದಿದ್ದಾರೆ. ಪರಿಸ್ಥಿತಿ ಎದುರಿಸುವ ಸಾಮರ್ಥ್ಯವಿಲ್ಲದೇ ನೆಪ ಹೇಳಿ ಪ್ರತಿಪಕ್ಷಗಳವರು ಹೊರ ಹೋಗುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡಿರುವ ಯಡಿಯೂರಪ್ಪ, ಸಿದ್ದರಾಮಯ್ಯ ಶಾಶ್ವತವಾಗಿ ಪ್ರತಿಪಕ್ಷದಲ್ಲಿ ಕೂರುವುದು ಶತಃಸಿದ್ಧ. 130ರಿಂದ 135 ಸೀಟುಗಳನ್ನು ಗೆದ್ದು ಸಿದ್ದರಾಮಯ್ಯ ಅವರನ್ನು ಪ್ರತಿಪಕ್ಷದಲ್ಲಿ ಕೂರಿಸದೇ ಹೋದರೆ ನಾನು ಯಡಿಯೂರಪ್ಪನೇ ಅಲ್ಲ ಎಂದು ಗುಡುಗಿದ್ದಾರೆ.

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ನಗರ ಶಿವಕುಮಾರಸ್ವಾಮಿ ಬಡಾವಣೆ ವಾಸಿ
ಶ್ರೀ ಕಿರವಾಡಿ ವೀರಭದ್ರಪ್ಪ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 06.03.2021ನೇ ಶನಿವಾರ ಬೆಳಿಗ್ಗೆ 8.50 ಕ್ಕೆ ನಮ್ಮ ಅಣ್ಣನವರಾದ
**ಶರಣ ಕಿರವಾಡಿ ಜಯದೇವಪ್ಪನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 10.03.2021ನೇ ಬುಧವಾರ ಬೆಳಿಗ್ಗೆ 11.30ಕ್ಕೆ
ಮೃತರ ಸ್ವಗೃಹ, 'ರುದ್ರೇಶ ಸದನ' ನಂ. 1080/13, ಮೊದಲನೇ ಕ್ರಾಸ್, ಮೊದಲನೇ ಹಂತ, ಶ್ರೀ ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.



ಲಿಂ|| ಶರಣ ಕಿರವಾಡಿ ಜಯದೇವಪ್ಪನವರು
ಮರಣ : 6-3-2021

ಇಂತಿ ದುಃಖತಪ್ತ ಕುಟುಂಬ ವರ್ಗ
ಶ್ರೀ ಕಿರವಾಡಿ ವೀರಭದ್ರಪ್ಪ ಮತ್ತು ಸಹೋದರರು
ಕಿರವಾಡಿ ವಂಶಸ್ಥರು ಹಾಗೂ ಬಂಧು-ಮಿತ್ರರು,
ದಾವಣಗೆರೆ. ಮೊ. : 94487 54235

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 08.03.2020ರಂದು ನಿಧನರಾದ
ಎ.ಪಿ.ಎಂ.ಸಿ. ವರ್ತಕರೂ, ಜಮೀನ್ದಾರರೂ
ನಮ್ಮ ಆತ್ಮೀಯರೂ ಆದ ಎಲೆಬೇತೂರಿನ
**ಶ್ರೀ ಎಂ. ನಾಗಬಸಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಸತ್ಯನಾರಾಯಣ ಆರ್. ರಾಯ್ಕರ್**
ಅಧ್ಯಕ್ಷರು
ದೈವಜ್ಞ ಬ್ರಾಹ್ಮಣ ಸಮಾಜ ಸಂಘ (ರಿ.)
ದಾವಣಗೆರೆ.

## ಹುಟ್ಟುಹಬ್ಬದ ಶುಭಾಶಯಗಳು



ಇತ್ತೀಚಿಗೆ ಮದುವೆ ವಾರ್ಷಿಕೋತ್ಸವ ಆಚರಿಸಿಕೊಂಡು ಇಂದು ತಮ್ಮ 60ನೇ ಜನ್ಮದಿನವನ್ನು ಆಚರಿಸಿ, ಶೀಘ್ರದಲ್ಲೇ ಬ್ಯಾಂಕ್ ಹುದ್ದೆಯಿಂದ ನಿವೃತ್ತಿ ಹೊಂದುತ್ತಿರುವ ಆತ್ಮೀಯ ಸ್ನೇಹಿತರಾದ
**ಶ್ರೀ ಕೆ.ಎಸ್. ಹವಳಪ್ಪ** ಅವರಿಗೆ ನಮ್ಮೆಲ್ಲರ ಹಾರ್ದಿಕ ಶುಭಾಶಯಗಳು.

✦ ಎಸ್. ನೀಲಕಂಠಪ್ಪ ✦ ಎ. ಭದ್ರಪ್ಪ ✦ ಎಸ್. ಮಲ್ಲಿಕಾರ್ಜುನ್ ✦ ನಾಗೇಂದ್ರರಾವ್
✦ ರಾಮಪ್ರಸಾದ್ ಗುಜ್ಜರ್ ✦ ಎಸ್. ಬಸವರಾಜ್ (Blue Mount)
✦ ಎಂ. ರವೀಂದ್ರ ಸಾವಂತ್ ✦ ಸಂತೋಷ್ ಶಾಮನೂರು
✦ ಹನುಮಂತು ಸೋನಾಲಿಕಾ ✦ ಆಲೂರು ವಿಜಯಕುಮಾರ್ ✦ ಡಿ. ಆಂಜನೇಯ
✦ ವೀರಣ್ಣ ಆಚಾರ್ ✦ ವಿವೇಕ್ ರಾಜನಹಳ್ಳಿ ✦ ಹೆಚ್.ಓ. ಗೋಪಾಲ್ (ಗೋಪಿ)
✦ ಸೋಮಶೇಖರ್ ✦ ಸಂತೋಷ್ ಬೆಳಗಾವಿ ಹಾಗೂ ಸ್ನೇಹಿತರು

## 25ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಯುತ
**ಎಂ. ಗಂಗಾಧರಪ್ಪ**
ಹುಚ್ಚವ್ವನಹಳ್ಳಿ.
ಜನನ : 1.11.1938, ಮರಣ : 9.3.1996
PWD ಕಂಟ್ರ್ಯಾಕ್ಟರ್
ಮಾಜಿ ಜಿಲ್ಲಾ ಉಪಾಧ್ಯಕ್ಷರು
ರೈತ ಸಂಘ, ದಾವಣಗೆರೆ.

ಗಂ ಡೆದೆಯ ಧೀರರಂತೆ ಬಾಳಿದಿರಿ...
ಗಾ ಢವಾಗಿ ಜನರನ್ನು, ಬದುಕನ್ನು ಪ್ರೀತಿಸುತ್ತಾ
ಧ ರಣಿಯಲ್ಲಿ ಸತ್ಯವಂತರಾಗಿ, ಛಲದಿಂದ ನಡೆದಿರಿ.
ರ ವಷ್ಟು ಅಳುಕದೇ, ಕುಂದದೇ ಧೈರ್ಯ ಶಾಲಿಯಾಗಿದ್ದ ನಮ್ಮ
ಪ್ಪ ನೀವೇ ನಮಗೆಲ್ಲಾ ದಾರಿದೀಪ... ಸದಾ ನಮ್ಮೊಳಗೆ ನೀವಿದ್ದೀರಿ ಅಪ್ಪಾಜಿ...

ನಿಮ್ಮ ಪ್ರೀತಿಯ ಕುಟುಂಬ ವರ್ಗ :
ಶ್ರೀಮತಿ ಗಂಗಮ್ಮ ಗಂಗಾಧರಪ್ಪ, ಮಕ್ಕಳು
ಅಳಿಯಂದಿರು, ಸೊಸೆ ಮತ್ತು ಮೊಮ್ಮಕ್ಕಳು, ದಾವಣಗೆರೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte